Advertisement will be issued /published in English, Hindi and local language newspapers. For District level events, quarter page advertisement will be released and for State level events, half a page advertisement will be released.

Keeping in view the significance of publicity and promotional activities required to be undertaken for PMEGP, an amount of Rs.16 Crore will be allocated during the four years period. 25 % of funds will be earmarked by KVIC to DICs for release of advertisement/ publicity of the Scheme, in accordance with the guidelines framed by KVIC while ensuring maximum coordination and synergy of efforts with KVIBs and DICs.

22. MIS Package, Application Tracking System, E-Portal and other supporting packages

22.1 E-governance is a vital requirement for effective monitoring and reviewing of the scheme. In addition, data base of existing REGP beneficiaries as well as PMRY have also

to be documented. A separate PMEGP website will be constructed by KVIC, including all the relevant linkages with Ministry of MSME, State KVIBs, DICs, NIC and Banks, providing all the necessary information. Application tracking system will also be introduced by KVIC in coordination with KVIBs / DICs for PMEGP beneficiaries. In addition Rural Industrial Consultancy Services (RICS)'s software package for project preparation of KVIC will be extended to all training centers in the country for assisting potential beneficiaries to prepare project under PMEGP. A separate provision is available under forward-backward linkages for the purposes for use by KVIC.

22.2. KVIC will issue further guidelines in regard to utilization of funds for the purposes outlined in the backward and forward linkages by ensuring proper documentation etc., from KVIBs and DICs. Proper account of the expenditure in this regard will be maintained by State/KVIBs/DICs and monitored by KVIC regularly.

23. Proposed Estimated Targets under PMEGP

23.1 The following estimated targets have been proposed under PMEGP during the four years, i.e., from 2008-09 to 2011-12.

Year	Employment (in Nos)	Margin Money (subsidy)(Rs.crore)
2008-09	616667	740.00
2009-10	740000	888.00
2010-11	962000	1154.40
2011-12	1418833	1702.60
Total	3737500	4485.00

Note:
1. An additional amount of Rs.250 crore has been earmarked for backward and forward linkages.
2. To begin with, the targets would be distributed between KVIC (including State KVIBs) and State DICs in the ratio of 60:40 to ensure comparatively greater emphasis to micro enterprises in rural areas. The margin money subsidy would also be allocated in the same ratio. DICs will ensure that at least 50% of the amount allocated to them will be utilized in the rural areas.
3. The annual allocation of targets would be issued State-wise to the implementing agencies.

23.2 Criteria for distribution of targets under PMEGP

The following are the broad suggested criteria for distribution of state-wise targets:

(i) Extent of backwardness of State;
(ii) Extent of unemployment;
(iii) Extent of fulfillment of targets under PMRY and REGP in 2007-08;
(iv) Extent of recovery of loans under PMRY and REGP in 2007-08;
(v) Population of State/Union Territory; and
(vi) Availability of traditional skills and raw material.

23.3 KVIC will assign targets to State KVIC Directorates/ KVIBs and State Governments. Target at District levels will be decided by State Level Bankers Coordination Committee. SLBCC will ensure that targets are evenly distributed within each district. The State-wise targets in respect of KVIC/KVIBs will be made available by KVIC to SLBCC where overall allocation of district-wise targets will be decided. Any modification of the targets for which KVIC is directly responsible will be permitted only with the concurrence of the Ministry. KVIC will identify the Nodal Bank Branches in consultation with State Governments and place the Margin Money (subsidy) with these branches both for rural and urban areas. For assigning the targets of subsidy and other parameters (number of units, employment opportunities, etc.) to KVIC Directorates / KVIBs, KVIC will adopt the criteria of rural population of the State, backwardness of the State (based on 250 backward districts identified by Planning Commission) and past performance of the State under REGP Scheme for deciding the targets as per weightages given below. Similarly, for assigning the targets to DICs, KVIC will adopt the criteria of backwardness of the State (based on 250 backward districts identified by Planning Commission), urban unemployment level (as reflected in the Planning Commission's report (2002) on 'Special Group on targeting ten million employment opportunities per year' and rural population of the State. From the second year (i.e., 2009-10) onwards, the performance of PMEGP during the previous year(s) will also be given appropriate weightage, for deciding the targets. The approximate weightages to be assigned for determining the targets to the implementing agencies are given below.

Criteria	Weightage for determining targets	
	KVIC/KVIBs	DICs
1. Rural Population of the State	40 %	30 %
2. Backwardness of the State	30 %	40 %
3. Urban Unemployment level	-	30 %
4. Past performance of REGP	30 %	-

24. Rehabilitation of Sick Units

Sick units under PMEGP for their rehabilitation will be linked with RBI's Guidelines for rehabilitation of sick small scale industrial units issued to all Scheduled Commercial Banks vide their letter RPCD.No.PLNFS.BC.57/06.04.01/2001-2002 dated 16th January, 2002.

25. Registration

Registration with the KVIC/KVIBs/State DICs under the Scheme is voluntary. No registration fee will be charged from the beneficiaries and the funds available under Forward and Backward linkage will be utilized to meet expenses on documentation cost, etc.

Beneficiary will submit quarterly report about production, sales, employment, wages paid etc. to the State/Regional Director of the KVIC/KVIB/State DIC, and KVIC will in turn analyze and submit a consolidated report to the Ministry of MSME, every six months.

26. Role of Private Sector (Scheduled, Commercial / Co-operative) Banks in the implementation of PMEGP

The Scheme will also be implemented through the Private Sector Scheduled Commercial Banks/Co-operative Banks on selective basis, after verification of intending Banks' last 3 years' Balance Sheet and ascertaining quantum of lending portfolio. Margin Money (subsidy) portion will be paid on actual reimbursement basis to the Banks by KVIC.

27. Monitoring and evaluation of PMEGP

27.1 Role of Ministry of MSME

Ministry of MSME will be the controlling and monitoring agency for implementation of the scheme. It will allocate target, sanction and release required funds to KVIC. Quarterly review meeting will be held in the Ministry on the performance of PMEGP. CEO, KVIC, Principal Secretaries / Commissioners (Industries) responsible for implementation of the Scheme in States through DICs, Representatives of State KVIBs and Senior officials of Banks will attend the meeting.

27.2 Role of KVIC

KVIC will be the single Nodal Implementing Agency of the Scheme at the National level. CEO, KVIC will review the performance with State KVIBs, DICs and Banks every month and submit a monthly performance report to the Ministry. The report will include the component wise details of beneficiaries indicating the amount of the Margin Money (subsidy) allotted, employment generated and the projects set up. KVIC will ensure that the margin money (subsidy) is utilized as per the sub component plans approved for SC, ST, Women, etc. The targets and achievement will also be monitored at the Zonal, State and District levels by the Dy.CEOs, Directors of KVIC and the Commissioner /Secretary of Industries (DIC), of the States concerned. The existing REGP units will continue to be monitored by the KVIC as hitherto fore, and separate monthly report submitted directly to Ministry of MSME.

27.3 Role of State Governments / Union Territories

The Scheme will be reviewed half yearly by Chief Secretary of the State. Representatives KVIC, Ministry of MSME, State Director (KVIC) CEO, KVIB, Secretary / Commissioner (Industries) of the State, Senior Officials of the Banks and other officials concerned will attend the meeting. State Governments {Commissioners / Secretaries (Industries)} will forward their monthly reports to KVIC, specifying the component wise details of beneficiaries indicating the amount of the Margin Money (subsidy) allotted, employment generated and the projects set up, which will be analyzed, compiled and consolidated by KVIC and a comprehensive report forwarded to Ministry every month. The existing PMRY units will continue to be monitored by the State DICs, as hitherto fore, and report submitted directly to Ministry of MSME.

28. Evaluation of the Scheme

A comprehensive, independent and rigorous evaluation of the scheme will be got done after two years of its implementation. Based on the findings of the evaluation study the scheme would be reviewed.

29. Negative List of Activities

The following list of activities will not be permitted under PMEGP for setting up of micro enterprises/ projects /units.

a) Any industry/ business connected with Meat(slaughtered), i.e. processing, canning and/or serving items made of it as food, production/manufacturing or sale of intoxicant items like Beedi/Pan/ Cigar/Cigarette etc., any Hotel or Dhaba or sales outlet serving liquor, preparation/producing tobacco as raw materials, tapping of toddy for sale.

b) Any industry/business connected with cultivation of crops/plantation like Tea, Coffee, Rubber etc. sericulture (Cocoon rearing), Horticulture, Floriculture. Value addition under these will be allowed under PMEGP

c) Any industry/business connected with Animal Husbandry like Pisciculture, Piggery, Poultry, etc.

d) Manufacturing of Polythene carry bags of less than 20 microns thickness and manufacture of carry bags or containers made of recycled plastic for storing, carrying, dispensing or packaging of food stuff and any other item which causes environmental problems.

ಅನುಬಂಧ - 2

ಸರ್ಕಾರದ ಆದೇಶ ಸಂಖ್ಯೆ: ಸಿಐ 129 ಸಿಎಸ್‌ಸಿ 2015, ದಿನಾಂಕ: 22.07.2015ರ

ಅನುಬಂಧ–1

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಮುಂದುವರೆದ ಕಾರ್ಯಕ್ರಮಗಳ ಅನುಷ್ಠಾನ - ಪರಿಷ್ಕೃತ ಮಾರ್ಗಸೂಚಿ

I. ಆಧುನೀಕರಣ / ತಾಂತ್ರಿಕ ತರಬೇತಿ

II. ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯ

III. ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ

IV. ಗುಡಿ ಮತ್ತು ಅತಿ ಸೂಕ್ಷ್ಮ ಕೈಗಾರಿಕಾ ಘಟಕಗಳು / ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಸಹಾಯಧನ

V. ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ / ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ

VI. ಸಣ್ಣ / ಅತಿ ಸಣ್ಣ ಕೈಗಾರಿಕೆಗಳಿಗೆ "ಡಿ" ಮಾದರಿಯ ಮಳಿಗೆಯ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಬಗ್ಗೆ

VII. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ

VIII. ಇಲಾಖೆಯ ತರಬೇತಿ ಸಂಸ್ಥೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ ಬಗ್ಗೆ.

IX. ಖಾದಿ ನೇಕಾರರಿಗೆ ಉಚಿತ ಚರಕಗಳ ಸರಬರಾಜು

I. ಆಧುನೀಕರಣ/ತಾಂತ್ರಿಕ ತರಬೇತಿ ಕಾರ್ಯಕ್ರಮಗಳಿಗೆ ಅನುಸರಿಸಬೇಕಾದ ಮಾರ್ಗಸೂಚಿಗಳು :

A) ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಆಯ್ಕೆಗೊಂಡ ನೈಪುಣ್ಯತೆ ಹೊಂದಿರುವ ತರಬೇತಿ ಕೇಂದ್ರಗಳು/ಇಲಾಖೆ ವತಿಯಿಂದ ಮೂಲಭೂತ ಸೌಕರ್ಯ ಪಡೆದು ಸ್ಥಾಪಿಸಿರುವ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳು / ಎಸ್‌ಕೆಕೆವೈ ಕೇಂದ್ರಗಳು ಮತ್ತು ಕಾಯರ್ ಕಾರ್ಪೋರೇಷನ್, ಕಾಯರ್ ಫೆಡರೇಷನ್ ಹಾಗೂ ಕಿಲ್ಪ್ ನಿಗಮ / ಸಂಸ್ಥೆಗಳಿಗೆ ಸ್ಥಳೀಯವಾಗಿ / ಸುತ್ತಮುತ್ತ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗೆ ಅವಶ್ಯಕತೆ ಇರುವ ಮಾನವ ಸಂಪನ್ಮೂಲ ಒದಗಿಸಿ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಹಾಗೂ ಸ್ವಯಂ ಉದ್ಯೋಗಗಳ ಸ್ಥಾಪನೆಗೆ ಅವಕಾಶ / ಸಾಧ್ಯತೆ ಇರುವ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನಿರುದ್ಯೋಗಿ ಯುವಕರಿಗೆ ಹಾಗೂ ಯುವತಿಯರಿಗೆ ಶೇ. 30 ರಷ್ಟು ಆದ್ಯತೆ ನೀಡಿ ಕೌಶಲ್ಯಾಭಿವೃದ್ಧಿ ತರಬೇತಿ ಅನುಷ್ಠಾನಗೊಳಿಸಲು ಹಾಗೂ ಕಾರ್ಯಕ್ರಮದ ವೆಚ್ಚವನ್ನು ಕೆಳಕಂಡಂತೆ ಭರಿಸಲು ನಿಗಧಿಪಡಿಸಿದೆ.

ಅ) ಶಿಷ್ಯವೇತನ	–	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.2,500/- ರಂತೆ
ಆ) ಬೋಧಕರ ಗೌರವಧನ	–	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.1000/- ರಂತೆ (ಒಟ್ಟು ಬೋಧಕರ ಗೌರವಧನ ಮಾಹೆಯಾನ 10 ಅಭ್ಯರ್ಥಿಗಳ ತಂಡಕ್ಕೆ ಗರಿಷ್ಟ ರೂ.10,000/- ಗಳಿಗೆ ಮಿತಿಗೊಳಿಸಿದೆ)
ಇ) ತರಬೇತಿ ಕಚ್ಚಾವಸ್ತುಗಳಿಗಾಗಿ	–	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ.1000/- ರಂತೆ
ಈ) ತರಬೇತಿ ಸಂಸ್ಥೆಗಳಿಗೆ ನಿರ್ವಹಣಾ ವೆಚ್ಚ	–	ತರಬೇತಿ ವೆಚ್ಚದ ಮೇಲೆ ಶೇ.10 ರಷ್ಟು ಸಾದಿಲ್ವಾರು ವೆಚ್ಚ ನೀಡಲಾಗುವುದು.
ಉ) ತರಬೇತಿಯ ಅವಧಿ	–	03 ತಿಂಗಳು
ಊ) ತರಬೇತಿ ವೆಚ್ಚ	–	03 ತಿಂಗಳ ತರಬೇತಿಗಾಗಿ ಪ್ರತಿ ಅಭ್ಯರ್ಥಿಗೆ ಒಟ್ಟು ರೂ.14,850/- ವೆಚ್ಚವನ್ನು ನಿಗಧಿಪಡಿಸಿದೆ.
ಋ) ತರಬೇತಿ ವೆಚ್ಚ	–	04 ತಿಂಗಳ ತರಬೇತಿಗಾಗಿ ಪ್ರತಿ ಅಭ್ಯರ್ಥಿಗೆ ಒಟ್ಟು ರೂ. 19,800/- ವೆಚ್ಚವನ್ನು ನಿಗಧಿಪಡಿಸಿದೆ.
ಎ) ತರಬೇತಿ ವೆಚ್ಚ	–	06 ತಿಂಗಳ ತರಬೇತಿಗಾಗಿ ಪ್ರತಿ ಅಭ್ಯರ್ಥಿಗೆ ಒಟ್ಟು ರೂ. 29,700/- ವೆಚ್ಚವನ್ನು ನಿಗಧಿಪಡಿಸಿದೆ.

B) ATDC (Apparel Training & Design Centre) ರವರಿಂದ **'SMART'** Operator Tailor Customized ವೃತ್ತಿಯಲ್ಲಿ ಹಮ್ಮಿಕೊಳ್ಳುವುದು.	–	02 ತಿಂಗಳ ತರಬೇತಿಗಾಗಿ ಈ ಕೆಳಕಂಡಂತೆ ತಗಲುವ ತರಬೇತಿ ವೆಚ್ಚ ಎ) ಕೋರ್ಸ್ ಶುಲ್ಕ – ನಿಗಧಿತ ಕೋರ್ಸ್ ಶುಲ್ಕ ಬಿ) ಶಿಷ್ಯವೇತನ ಮಾಹೆಯಾನ ರೂ.2,500/-

C) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ವತಿಯಿಂದ ಹಮ್ಮಿಕೊಳ್ಳುವ ತರಬೇತಿಗಳ ವೆಚ್ಚ

ಕ್ರ ಸಂ.	ತರಬೇತಿ ಅವಧಿ	ವೆಚ್ಚ	ವಿದ್ಯಾರ್ಹತೆ ಮತ್ತು ವಯಸ್ಸು
1	4 ತಿಂಗಳ ತರಬೇತಿಗೆ ನಿಗದಿಪಡಿಸಿದ ವೃತ್ತಿಗಳು	ಪ್ರತಿ ಅಭ್ಯರ್ಥಿಗೆ ರೂ.21,600/- ರಂತೆ ಕೋರ್ಸ್ ಶುಲ್ಕ + ಮಾಹೆಯಾನ ರೂ.2500-00 ದಂತೆ 4 ತಿಂಗಳಿಗೆ ರೂ.10,000-00 ಶಿಷ್ಯವೇತನ/ಊಟ ಮತ್ತು ವಸತಿಸಹಿತ ವೆಚ್ಚ ಒಟ್ಟು ರೂ.31600-00	ಎಸ್‌ಎಸ್‌ಎಲ್‌ಸಿ ಉತ್ತೀರ್ಣ / ಅನುತ್ತೀರ್ಣ ಕನಿಷ್ಠ 16 ವರ್ಷ ಗರಿಷ್ಠ 45 ವರ್ಷ
2	6 ತಿಂಗಳ ತರಬೇತಿಗೆ ನಿಗದಿಪಡಿಸಿದ ವೃತ್ತಿಗಳು	ಪ್ರತಿ ಅಭ್ಯರ್ಥಿಗೆ ರೂ.32,400/- ರಂತೆ ಕೋರ್ಸ್ ಶುಲ್ಕ ಮಾಹೆಯಾನ ರೂ.2500-00 ದಂತೆ 6 ತಿಂಗಳಿಗೆ ರೂ.15,000-00 ಶಿಷ್ಯವೇತನ/ಊಟ ಮತ್ತು ವಸತಿ ವೆಚ್ಚ ಒಟ್ಟು ರೂ.47400-00	ಎಸ್‌ಎಸ್‌ಎಲ್‌ಸಿ ಉತ್ತೀರ್ಣ / ಅನುತ್ತೀರ್ಣ ಕನಿಷ್ಠ 16 ವರ್ಷ ಗರಿಷ್ಠ 45 ವರ್ಷ
3	12 ತಿಂಗಳ ತರಬೇತಿಗೆ ನಿಗದಿಪಡಿಸಿದ ವೃತ್ತಿಗಳು	ಪ್ರತಿ ಅಭ್ಯರ್ಥಿಗೆ ರೂ.60,000/- ರಂತೆ ಕೋರ್ಸ್ ಶುಲ್ಕ ಮಾಹೆಯಾನ ರೂ.2500-00 ದಂತೆ 12 ತಿಂಗಳಿಗೆ ರೂ.30,000-00 ಶಿಷ್ಯವೇತನ/ಊಟ ಮತ್ತು ವಸತಿ ವೆಚ್ಚ ಒಟ್ಟು ರೂ.90000-00	ಐಟಿಐ ಅಥವಾ ಡಿಪ್ಲೊಮಾ ತೇರ್ಗಡೆ ಕನಿಷ್ಠ 16 ವರ್ಷ ಗರಿಷ್ಠ 45 ವರ್ಷ

D) Central Institute of Plastics Engineering & Technology (CIPET), ಮೈಸೂರು

ಕ್ರ ಸಂ.	ತರಬೇತಿ ಅವಧಿ	ವೆಚ್ಚ	ವಿದ್ಯಾರ್ಹತೆ
1	6 ತಿಂಗಳ ತರಬೇತಿಗೆ ನಿಗದಿಪಡಿಸಿದ ವೃತ್ತಿಗಳು	ಪ್ರತಿ ಅಭ್ಯರ್ಥಿಗೆ ರೂ.42,000/- ರಂತೆ ಕೋರ್ಸ್ ಶುಲ್ಕ + ಮಾಹೆಯಾನ ರೂ.2500-00 ದಂತೆ 6 ತಿಂಗಳಿಗೆ ರೂ.15,000-00 ಶಿಷ್ಯವೇತನ/ಊಟ ಮತ್ತು ವಸತಿಸಹಿತ ವೆಚ್ಚ ಒಟ್ಟು ರೂ.57000-00	ಎಸ್‌ಎಸ್‌ಎಲ್‌ಸಿ ತೇರ್ಗಡೆ ಕನಿಷ್ಠ 16 ವರ್ಷ ಗರಿಷ್ಠ 45 ವರ್ಷ

ವಿಶೇಷ ಸೂಚನೆ:

1) ತರಬೇತಿ ಸಂಸ್ಥೆಗಳಿಂದ ಅಭ್ಯರ್ಥಿಗಳಿಗೆ ನೀಡುವ ಮಾಹೆಯಾನ ಶಿಷ್ಯವೇತನವನ್ನು ಅಭ್ಯರ್ಥಿಗಳ ಬ್ಯಾಂಕ್ ಖಾತೆ ಮೂಲಕ ಕಡ್ಡಾಯವಾಗಿ ಪಾವತಿಸತಕ್ಕದ್ದು.

2) ವಿವಿಧ ವೃತ್ತಿಗಳಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಈ ಹಿಂದೆ ನೀಡಲಾಗುತ್ತಿದ್ದ ಉಚಿತ ಸುಧಾರಿತ ಉಪಕರಣಗಳ ಬದಲಾಗಿ ಹಾಲಿ ಜಾರಿಯಲ್ಲಿರುವ ಯೋಜನಾ ವೆಚ್ಚ ಮೇಲೆ ಶೇ.60 ರಷ್ಟು ಬ್ಯಾಂಕ್‌ನಿಂದ ಸಾಲ ಪಡೆದು ಉದ್ದಿಮೆಗಳನ್ನು ಸ್ಥಾಪಿಸಲು ಇರುವ ಯೋಜನೆಯಡಿ ಸದರಿ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯಗಳನ್ನು ಕಲ್ಪಿಸುವುದು.

II. ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು:

ಸರ್ಕಾರದಿಂದ ಯಾವುದೇ ಯೋಜನೆಯಡಿಯಲ್ಲಿ ವೃತ್ತಿನಿರತ ಕುಶಲಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ಸೌಲಭ್ಯಗಳನ್ನು ಪಡೆಯದೇ ಇರುವ ಕುಶಲಕರ್ಮಿಗಳಿಗೆ ಈ ಇಲಾಖೆಯಿಂದ ಈ ಕೆಳಕಂಡ ವೃತ್ತಿಗಳಲ್ಲಿ ನಿರಂತರವಾಗಿ ತೊಡಗಿದವರನ್ನು ಮಾತ್ರ ಆಯ್ಕೆ ಮಾಡಬೇಕು. ಈ ಕೆಳಕಂಡ ವೃತ್ತಿಗಳ ಹೊರತುಪಡಿಸಿ ಬೇರೆ/ಇತರೆ ಕುಶಲಕರ್ಮಿಗಳಿಗೆ ಈ ಸೌಲಭ್ಯ ನೀಡಬೇಕಾದಲ್ಲಿ ಕಡ್ಡಾಯವಾಗಿ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆಯತಕ್ಕದ್ದು.

ಕ್ರ.ಸಂ.	ವೃತ್ತಿಯ ಹೆಸರು	ಕ್ರ.ಸಂ.	ವೃತ್ತಿಯ ಹೆಸರು
01	ಬಿದಿರು ಕೆಲಸ	07	ಜನರಲ್ ಇಂಜಿನಿಯರಿಂಗ್
02	ಬೆತ್ತದ ಕೆಲಸ	08	ಚಾಪೆ ಹೆಣೆಯುವುದು
03	ಬಡಗಿ ಕೆಲಸ	09	ಬುಟ್ಟಿ ಹೆಣೆಯುವುದು
04	ಕಮ್ಮಾರಿಕೆ	10	ತೆಂಗಿನ ನಾರಿನ ಉತ್ಪನ್ನ ತಯಾರಿಕೆ
05	ಚರ್ಮ ವಸ್ತುಗಳ ತಯಾರಿಕೆ	11	ಕುಂಬಾರಿಕೆ
06	ಕರಕುಶಲ ವಸ್ತು ತಯಾರಿಕೆ, ಟೈಲರಿಂಗ್ ಹೊರತುಪಡಿಸಿ		

ಫಲಾನುಭವಿಗಳ ಆಯ್ಕೆ ವಿಧಾನ:

ಸಂಬಂಧಪಟ್ಟ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳು ವಸತಿ ರಹಿತ/ವೃತ್ತಿನಿರತ ಕುಶಲಕರ್ಮಿಗಳನ್ನು ಗುರುತಿಸಿ ಫಲಾನುಭವಿಗಳ ಪಟ್ಟಿಯನ್ನು ದಾಖಲಾತಿಗಳೊಂದಿಗೆ ದೃಢೀಕರಿಸಿ ಜಂಟಿ ನಿರ್ದೇಶಕರು, ಜಿಕೈಕೇ ರವರಿಗೆ ಸಲ್ಲಿಸತಕ್ಕದ್ದು. ಜಂಟಿ ನಿರ್ದೇಶಕರು, ಜಿಕೈಕೇ ರವರು ಸದರಿ ಗುರುತಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಈ ಕೆಳಕಂಡ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಮಂಡಿಸಿ, ಆಯ್ಕೆ ಮಾಡತಕ್ಕದ್ದು

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ	-	ಅಧ್ಯಕ್ಷರು
ಉಪ ನಿರ್ದೇಶಕರು(ಖಾ.ಗ್ರಾ), ಜಿಲ್ಲಾ ಪಂಚಾಯತ್	-	ಸದಸ್ಯರು
ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ	-	ಸದಸ್ಯರು
ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ	-	ಸದಸ್ಯರು
ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಮಾರ್ಗದರ್ಶಿ ಬ್ಯಾಂಕ್	-	ಸದಸ್ಯರು
ಜಿಲ್ಲಾಧಿಕಾರಿಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ	-	ಸದಸ್ಯರು
ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ	-	ಸದಸ್ಯ ಕಾರ್ಯದರ್ಶಿ

ವಸತಿ ಕಾರ್ಯಾಗಾರಗಳ ನಿರ್ಮಾಣವನ್ನು ಈ ಕೆಳಗೆ ಕಾಣಿಸಿದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅನುಷ್ಠಾನಗೊಳಿಸಬೇಕು:-

1) ಕನಿಷ್ಟ 399 ಚ.ಅ. ವಿಸ್ತೀರ್ಣದಲ್ಲಿ (ಎ.ಸಿ.ಸಿ. ಅಥವಾ ಆರ್.ಸಿ.ಸಿ. ಮೇಲ್ಛಾವಣಿ) ವಾಸದ ಮನೆ ಹಾಗೂ ವೃತ್ತಿಗೆ ಅನುಗುಣವಾಗಿ ಕೆಲಸ ನಿರ್ವಹಿಸಲು ಅನುವಾಗುವಂತೆ ಕಾರ್ಯಾಗಾರ ನಿರ್ಮಿಸುವುದು.

2) ಫಲಾನುಭವಿಗಳನ್ನು ಗುರುತಿಸಿ ಅವರಿಂದ ಪಡೆಯುವ ದಾಖಲಾತಿಗಳನ್ನು ತಮ್ಮ ಕಛೇರಿಯಲ್ಲಿ ಇಟ್ಟುಕೊಳ್ಳುವುದು. ಜಾತಿ ಪ್ರಮಾಣ ಪತ್ರ, ನಿವೇಶನ ಹಕ್ಕು ಪತ್ರ, ವೃತ್ತಿ ದೃಢೀಕರಣ ಪತ್ರ ಪಡೆಯುವುದು.

3) ಕಟ್ಟಡ ನಿರ್ಮಾಣದ ಗುಣಮಟ್ಟ ಕಾಯ್ದುಕೊಳ್ಳುವುದು.

4) ಈ ಕಛೇರಿಗೆ ಫಲಾನುಭವಿಗಳ ಪಟ್ಟಿ, ವಸತಿ ಕಾರ್ಯಾಗಾರಗಳ ನಕ್ಷೆಯ ಒಂದು ಪ್ರತಿ ಸಲ್ಲಿಸುವುದು.

5) ಮಂಜೂರಾತಿ ನೀಡಲಾಗಿರುವ ವಸತಿ ಕಾರ್ಯಾಗಾರಗಳ ಕಟ್ಟಡಗಳನ್ನು 120 ದಿನಗಳ (4 ತಿಂಗಳ) ಒಳಗೆ ಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.

6) ನಿರ್ಮಿಸುವ ಕಟ್ಟಡದಲ್ಲಿ ವಾಸಿಸಲು ಕೊಠಡಿ, ಕೆಲಸ ನಿರ್ವಹಿಸಲು ಕಾರ್ಯಾಗಾರ, ಅಡಿಗೆ ಕೋಣೆ, ಸ್ನಾನದ ಕೊಠಡಿ, ಶೌಚಾಲಯ ಹೊಂದಿಕೊಂಡಂತೆ ಕಟ್ಟಡ ನಿರ್ಮಿಸುವುದು.

7) ಪ್ರತಿ ವಸತಿ ಕಾರ್ಯಾಗಾರದ ಯೋಜನಾ ವೆಚ್ಚವು ರೂ.2.50 ಲಕ್ಷಕ್ಕೆ ನಿಗಧಿಪಡಿಸಿದ್ದು, ಶೇ.90 ರಷ್ಟು ಅಂದರೆ ಗರಿಷ್ಟ ರೂ.2.25 ಲಕ್ಷಗಳ ಸಹಾಯಧನವನ್ನು ಇಲಾಖೆ ವತಿಯಿಂದ ನೀಡಲಾಗುವುದು. ಉಳಿದ ರೂ.25,000-00 ಗಳ ಮೊತ್ತವನ್ನು ಸಂಬಂಧಪಟ್ಟ ಫಲಾನುಭವಿಗಳು ಭರಿಸತಕ್ಕದ್ದು. ಸಹಾಯಧನ ಮೊತ್ತವನ್ನು 3 ಹಂತಗಳಲ್ಲಿ ಬಿಡುಗಡೆ ಮಾಡುವುದು. ಒಂದನೇ ಕಂತು ತಳಪಾಯ ಮುಗಿದ ನಂತರ, 2ನೇ ಕಂತನ್ನು ಛಾವಣಿ ಮಟ್ಟ ಬಂದಾಗ ಕಟ್ಟಡದ ಗುಣಮಟ್ಟವು ತೃಪ್ತಿಕರವಾದಲ್ಲಿ ಪರಿಶೀಲಿಸಿ ಬಿಡುಗಡೆಗೊಳಿಸುವುದು. ಸಹಾಯಧನದ 3ನೇ ಕಂತನ್ನು ಕಟ್ಟಡದ ಛಾವಣಿ ಪೂರ್ಣಗೊಂಡ ನಂತರ ಉಳಿದ ಕಾಮಗಾರಿ ಪೂರ್ಣಗೊಳಿಸಲು ಬಿಡುಗಡೆ ಮಾಡುವುದು. ವಸತಿ ಕಾರ್ಯಾಗಾರದ ವೆಚ್ಚವು ರೂ.2.50 ಲಕ್ಷ ಮೀರಿದಲ್ಲಿ ಸದರಿ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಯೇ ಭರಿಸತಕ್ಕದ್ದು.

8) ಕಟ್ಟಡದ ಗೋಡೆಯ ಎತ್ತರ 10 ಅಡಿ ಇದ್ದು, ದಪ್ಪ ಕನಿಷ್ಟ 9 ಅಂಗುಲ (ಇಟ್ಟಿಗೆ ಕಲ್ಲಿನಿಂದ) ಉಳ್ಳದ್ದಾಗಿರಬೇಕು. ಕಟ್ಟಡಕ್ಕೆ ಕನಿಷ್ಟ 2 ಬಾಗಿಲುಗಳು (3 ಅಡಿ ಅಗಲ ಮತ್ತು 6 ಅಡಿ ಎತ್ತರ) 2 ಕಿಟಕಿಗಳು (2 ಅಡಿ ಅಗಲ 1 ಅಡಿ ಎತ್ತರ) ಸಹ ಇರುವಂತೆ ನಕಾಶೆಯಂತೆ ಕಾರ್ಯಗತಗೊಳಿಸುವುದು.

9) ನೈರ್ಮಲ್ಯ ಕಾಪಾಡಿಕೊಳ್ಳುವ ಸಲುವಾಗಿ ಕೊಳಚೆ ನೀರಿನ ಮತ್ತು ಕೊಳಚೆ ವಸ್ತುಗಳ ವಿಸರ್ಜನೆಗೆ ಅನುಕೂಲವಾಗುವಂತೆ ಸೌಲಭ್ಯ ಒದಗಿಸುವುದು.

10) ನೆಲ:- ಸಿಮೆಂಟ್ ನೆಲ ಅಥವಾ ಕಲ್ಲಿನ ನೆಲ ವೃತ್ತಿಗನುಗುಣವಾಗಿ ಇರುವಂತೆ ನೋಡಿಕೊಳ್ಳಬೇಕು.

11) ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಉತ್ತಮ ಕಾರ್ಯಾಗಾರಗಳನ್ನು ನಿರ್ಮಿಸಿ ನಿಯಮಾನುಸಾರ ಕಾರ್ಯಾಗಾರಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸುವ ಜವಾಬ್ದಾರಿ ಸಂಬಂಧಿಸಿದ ಆಯಾ ಜಿಲ್ಲೆಯ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರುಗಳದ್ದಾಗಿರುತ್ತದೆ.

12) ಕುಶಲಕರ್ಮಿಗಳಿಗೆ ಸಹಾಯಧನವನ್ನು ಚೆಕ್ ಮೂಲಕ ವಿತರಿಸಬೇಕು.

13) ತಮ್ಮ ಪಾಲಿನ ಮೊತ್ತವನ್ನು ಭರಿಸಲು ಶಕ್ಯವಿರುವ ಫಲಾನುಭವಿಗಳಿಗೆ ಆದ್ಯತೆ ನೀಡಿದಲ್ಲಿ ನಿರ್ಮಾಣ ಕಾರ್ಯ ಸುಸೂತ್ರವಾಗಿ ಮುಂದುವರಿಯುವುದರಿಂದ ಅಂತಹ ಫಲಾನುಭವಿಗಳಿಗೆ ಆಯ್ಕೆ ಆದ್ಯತೆ ಪರಿಗಣಿಸಬಹುದು.

14) ಸದರಿ ಯೋಜನೆಯಡಿ ಫಲಾನುಭವಿಗಳನ್ನು ಕೈಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರವರ ಅಧ್ಯಕ್ಷತೆಯಲ್ಲಿ ರಚಿಸಿರುವ ಆಯ್ಕೆ ಸಮಿತಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು ಹಾಗೂ ಆಯ್ಕೆ ಮಾಡುವ ಸಂದರ್ಭದಲ್ಲಿ ಸದರಿ ಫಲಾನುಭವಿಗಳು ಸರ್ಕಾರದ ಇತರೆ ಯಾವುದೇ ಯೋಜನೆಯಡಿ ವಸತಿ ಸೌಲಭ್ಯವನ್ನು ಪಡೆದಿಲ್ಲವೆಂದು ಖಚಿತ ಪಡಿಸಿಕೊಳ್ಳತಕ್ಕದ್ದು.

15) ಹಂಚಿಕೆ ಮಾಡಿರುವ ವಸತಿ ಕಾರ್ಯಗಾರಗಳನ್ನು ಬೇರೆಯವರಿಗೆ ಬಾಡಿಗೆ ಮೇಲೆ ನೀಡುವುದಾಗಲೀ ಅಥವಾ ಪರಭಾರೆ ಮಾಡತಕ್ಕದ್ದಲ್ಲ. ತಪ್ಪಿದ್ದಲ್ಲಿ, ಸದರಿ ಹಂಚಿಕೆಯು ತಂತಾನೆ ರದ್ದುಗೊಳ್ಳುತ್ತದೆ.

16) **ಮೇಲ್ಕಂಡ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಬೇಕಿದ್ದಲ್ಲಿ ಸರ್ಕಾರದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು**

III. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ / ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ರವರುಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳಿಗೆ ರಿಯಾಯಿತಿ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ ನಿವೇಶನ/ಪ್ಲಾಟ್/ಶೆಡ್‌ಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಸದರಿ ರಿಯಾಯಿತಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ ರವರಿಗೆ ಮರುಪಾವತಿ ಮಾಡಲಾಗುವುದು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ:

ಗರಿಷ್ಠ ನಿವೇಶನ – ಮಂಡಳಿಯಿಂದ ಗರಿಷ್ಠ 2 ಎಕರೆ ಜಮೀನನ್ನು ರಿಯಾಯಿತಿ ದರದಲ್ಲಿ ನೀಡಬಹುದು.

ರಿಯಾಯಿತಿ ದರ – ಜಮೀನಿನ ಬೆಲೆಯ ಮೇಲೆ ನೀಡುವ ರಿಯಾಯಿತಿ ದರವನ್ನು ಹೊಸ ಕೈಗಾರಿಕಾ ನೀತಿ 2014–19 ರಲ್ಲಿ ವಿವಿಧ ವಲಯಗಳಿಗೆ ನಿಗದಿಪಡಿಸಿರುವ ರಿಯಾಯಿತಿಯಂತೆ ನೀಡಬಹುದು.

ರಿಯಾಯಿತಿ ಮರುಪಾವತಿ ವಿಧಾನ –

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ನಿವೇಶನವನ್ನು ಹಂಚಿಕೆ ಮಾಡಿ ಸ್ವಾಧೀನ ಪತ್ರವನ್ನು ಉದ್ದಿಮೆದಾರರಿಗೆ ನೀಡಿದ ಮೇಲೆ ಫಲಾನುಭವಿಯ ಜಾತಿ ಪ್ರಮಾಣ ಪತ್ರದ ಪ್ರತಿ ಮತ್ತು ಸ್ವಾಧೀನ ನೀಡಲಾದ ಪತ್ರದ ಪ್ರತಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಫಲಾನುಭವಿಯ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

2. ಪ್ರಸ್ತಾವನೆಯನ್ನು ಪರಿಶೀಲಿಸಿ ಉದ್ದಿಮೆದಾರರು ಈಗಾಗಲೇ ಸ್ವಾಧೀನ ಪಡೆದಿರುವ ನಿವೇಶನಗಳಿಗೆ ನಿಯಮಾವಳಿಯಂತೆ ಅರ್ಹವಿರುವ ರಿಯಾಯಿತಿ ದರವನ್ನು ಹೊಸ ಕೈಗಾರಿಕಾ ನೀತಿ 2014–19 ರಲ್ಲಿ ವಿವಿಧ ವಲಯಗಳಿಗೆ ನಿಗದಿಪಡಿಸಿರುವ ರಿಯಾಯಿತಿಯಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮರುಪಾವತಿ ಮಾಡಲಾಗುವುದು.

3. ತದನಂತರ ಉಪಯುಕ್ತತಾ ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ:

ಗರಿಷ್ಠ ಪ್ಲಾಟ್ – ನಿಗಮದಿಂದ ಗರಿಷ್ಠ 2 ಎಕರೆ ಜಮೀನನ್ನು ರಿಯಾಯಿತಿ ದರದಲ್ಲಿ ನೀಡಬಹುದು.

ಶೆಡ್ – ಗರಿಷ್ಠ 501 ಚ.ಮೀ. ಶೆಡ್ ಹಂಚಿಕೆ ಮಾಡಬಹುದು.

ರಿಯಾಯಿತಿ ದರ – ಪ್ಲಾಟ್ / ಶೆಡ್ ಬೆಲೆಯ ಮೇಲೆ ನೀಡುವ ರಿಯಾಯಿತಿ ದರವನ್ನು ಹೊಸ ಕೈಗಾರಿಕಾ ನೀತಿ 2014–19 ರಲ್ಲಿ ವಿವಿಧ ವಲಯಗಳಿಗೆ ನಿಗದಿಪಡಿಸಿರುವ ರಿಯಾಯಿತಿಯಂತೆ ನೀಡಬಹುದು.

ರಿಯಾಯಿತಿ ಮರುಪಾವತಿ ವಿಧಾನ –

1) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿವೇಶನ/ಪ್ಲಾಟ್‌ವನ್ನು ಹಂಚಿಕೆ ಮಾಡಿ ಸ್ವಾಧೀನ ಪತ್ರವನ್ನು ಉದ್ದಿಮೆದಾರರಿಗೆ ನೀಡಿದ ಮೇಲೆ ಫಲಾನುಭವಿಯ ಜಾತಿ ಪ್ರಮಾಣ ಪತ್ರದ ಪ್ರತಿ ಮತ್ತು ಸ್ವಾಧೀನ ನೀಡಲಾದ ಪತ್ರದ ಪ್ರತಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಫಲಾನುಭವಿಯ ವಿವರಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.
2) ಪ್ರಸ್ತಾವನೆಯನ್ನು ಪರಿಶೀಲಿಸಿ ಉದ್ದಿಮೆದಾರರು ಈಗಾಗಲೇ ಸ್ವಾಧೀನ ಪಡೆದಿರುವ ನಿವೇಶನ/ಶೆಡ್‌ಗಳಿಗೆ ನಿಯಮಾವಳಿಯಂತೆ ಅರ್ಹವಿರುವ ರಿಯಾಯಿತಿ ದರವನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮಕ್ಕೆ ಮರುಪಾವತಿ ಮಾಡಲಾಗುವುದು.
3) ತದನಂತರ ಉಪಯುಕ್ತತಾ ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

IV) <u>ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು / ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಸಹಾಯಧನ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು</u>

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಾಗೂ ಕುಶಲಕರ್ಮಿಗಳು ತಮ್ಮ ಚಟುವಟಿಕೆಗಳನ್ನು ಮುಂದುವರೆಸಲು ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಅರ್ಹರಿರುತ್ತಾರೆ.

ಅರ್ಹತೆ:

1) ಘಟಕವನ್ನು ಪ್ರಾರಂಭಿಸುವ ಉದ್ದಿಮೆದಾರರು ಕನಿಷ್ಠ 18 ವರ್ಷ ವಯೋಮಾನ ಪೂರೈಸಿರಬೇಕು
2) ಹೊಸ/ವಿಸ್ತರಣಾ/ಆಧುನೀಕರಣ ಘಟಕಗಳಿಗೆ ಈ ಯೋಜನೆಯಡಿ ಸಹಾಯಧನ ದೊರಕುವುದು.
3) ಘಟಕಗಳು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆ ಸ್ಥಾಪಿಸುವುದು.
4) ಕೈಗಾರಿಕಾ ಅಥವಾ ಸೇವಾ ಚಟುವಟಿಕೆಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಮಂಜೂರಾಗುವ ಸಾಲದ ಆಧಾರದ ಮೇಲೆ ಸಹಾಯಧನ ಮಂಜೂರು ಮಾಡಲಾಗುವುದು.
5) ಫಲಾನುಭವಿಯು ಈ ಹಿಂದೆ ಸಾಲ ಪಡೆದು ಸುಸ್ತಿದಾರರಾಗಿರತಕ್ಕದ್ದಲ್ಲ.
6) ಫಲಾನುಭವಿಯು ಸರ್ಕಾರದ ಇತರ ಯಾವುದೇ ಯೋಜನೆಯಡಿ ರಿಯಾಯಿತಿ / ಪ್ರೋತ್ಸಾಹ ಪಡೆದಿರತಕ್ಕದ್ದಲ್ಲ.

ವಿಶೇಷ ಸೂಚನೆ: <u>ಕೇವಲ ದುಡಿಮೆ ಬಂಡವಾಳ ಪಡೆದ ಘಟಕಗಳು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.</u>

ಮೇಲಿನಂತೆ ಅರ್ಹತೆ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಶಲಕರ್ಮಿಗಳು/ ಉದ್ದಿಮೆದಾರರು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಮಂಜೂರಾದ ಸಾಲದ ಮೇಲೆ ಸಹಾಯಧನ ಮಂಜೂರು ಮಾಡಲು ಕೆಳಕಂಡ ದಾಖಲಾತಿಗಳನ್ನು ಇಲಾಖೆಗೆ ಸಲ್ಲಿಸಬೇಕು.

1) ನಿಗಧಿತ ನಮೂನೆಯಲ್ಲಿ ಅರ್ಜಿ
2) ಎಸ್‌ಸಿ/ಎಸ್‌ಟಿ ಜಾತಿ ಪ್ರಮಾಣ ಪತ್ರ
3) ಭೂಮಿ/ನಿವೇಶನದ ದಾಖಲಾತಿ ಪತ್ರ
4) ಕಟ್ಟಡ ಬಾಡಿಗೆ ಇದ್ದಲ್ಲಿ ಬಾಡಿಗೆ ಕರಾರು ಪತ್ರ
5) ಬ್ಯಾಂಕಿನಿಂದ ಸಾಲ ಮಂಜೂರಾದ ಪತ್ರ
6) ಇಲಾಖೆಯಿಂದ ಪಡೆದಿರುವ IEM-1
7) ಯೋಜನಾ ಸ್ಥೂಲ ವರದಿ

<u>ಅರ್ಹ ಸಹಾಯಧನ ಮೊತ್ತ:</u>

1) ಪ್ರವರ್ತಕರು ಯೋಜನಾ ವೆಚ್ಚದ ಶೇ.10 ರಷ್ಟನ್ನು ಭರಿಸಬೇಕು.
2) ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಪಡೆಯುವುದು.
3) ಹಣಕಾಸು ಸಂಸ್ಥೆ/ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್‌ಗಳಿಂದ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಟ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ಮೇಲ್ಕಂಡ ದಾಖಲಾತಿಗಳನ್ನು ಘಟಕಗಳಿಂದ ಪಡೆದು ಅರ್ಹ ಸಹಾಯಧನ ಮಂಜೂರು ಮಾಡಲು ಕೆಳಕಂಡಂತೆ ಮಂಜೂರಾತಿ ಸಮಿತಿ ರಚಿಸಲಾಗಿದೆ. ಸದರಿ ಸಮಿತಿಯು ಆಗಿಂದಾಗ್ಗೆ ಸಭೆ ಸೇರಿ ಪರಿಶೀಲಿಸಿ ಅರ್ಹ ಪ್ರಸ್ತಾವನೆಗಳಿಗೆ ಅರ್ಹ ಸಹಾಯಧನ ಮಂಜೂರು ಮಾಡಿ ಮಂಜೂರಾತಿ ಆದೇಶ ಹೊರಡಿಸಬೇಕು.

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ	–	ಅಧ್ಯಕ್ಷರು
ಉಪ ನಿರ್ದೇಶಕರು(ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ), ಜಿಲ್ಲಾ ಪಂಚಾಯತ್	–	ಸದಸ್ಯರು
ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಸಮಾಜ ಕಲ್ಯಾಣ ಇಲಾಖೆ	–	ಸದಸ್ಯರು
ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ	–	ಸದಸ್ಯರು
ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಮಾರ್ಗದರ್ಶಿ ಬ್ಯಾಂಕ್	–	ಸದಸ್ಯರು
ಜಿಲ್ಲಾಧಿಕಾರಿಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ	–	ಸದಸ್ಯರು
ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಜಿ.ಕೈ.ಕೇಂದ್ರ	–	ಸದಸ್ಯ ಕಾರ್ಯದರ್ಶಿ

ಸಹಾಯಧನ ಮಂಜೂರಾದ ಘಟಕಗಳಿಗೆ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳು ಮೊದಲನೇ ಕಂತಿನ ಸಾಲ ಬಿಡುಗಡೆಯಾದ ನಂತರ ಸಹಾಯಧನ ಬಿಡುಗಡೆ ಕೋರಿ ನಿಗಧಿತ ನಮೂನೆಯಲ್ಲಿ ಕೇಂದ್ರ ಕಛೇರಿಯ ಅಧಿಕ ನಿರ್ದೇಶಕರು(ಜಿಲ್ಲಾ ಕೈಗಾರಿಕಾ ಕೇಂದ್ರ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವುದು.

ಸಹಾಯಧನ ಬಿಡುಗಡೆ ವಿಧಾನ:

1) ಜಂಟಿ ನಿರ್ದೇಶಕರುಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ಜಂಟಿ ನಿರ್ದೇಶಕರಿಗೆ ಅನುದಾನ ಮಂಜೂರು ಮಾಡಿ ಬಿಡುಗಡೆ ಮಾಡಲಾಗುವುದು.

2) ಜಂಟಿ ನಿರ್ದೇಶಕರು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಲ್ಲಿ ಫಲಾನುಭವಿಯ ಹೆಸರಿನಲ್ಲಿ ಪ್ರತ್ಯೇಕವಾಗಿ 2 ವರ್ಷಗಳ ಅವಧಿಗೆ ಠೇವಣಿ ಇಡಲು ಕ್ರಮ ಕೈಗೊಳ್ಳುವುದು.

3) ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇದ್ದಲ್ಲಿ, ಸದರಿ ಸಹಾಯಧನ ಮೊತ್ತವನ್ನು ಫಲಾನುಭವಿಯ ಸಾಲದ ಖಾತೆಗೆ ಹೊಂದಾಣಿಕೆ (Back end Subsidy) ಮಾಡಲು ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಿಗೆ ಸೂಕ್ತ ನಿರ್ದೇಶನವನ್ನು ಜಂಟಿ ನಿರ್ದೇಶಕರು ನೀಡುವುದು.

4) ಘಟಕವು 2 ವರ್ಷದ ಅವಧಿಯೊಳಗೆ ಕಾರ್ಯಾರಂಭಗೊಂಡು ಚಾಲ್ತಿ ಇಲ್ಲದೇ ಇದ್ದಲ್ಲಿ ಈಗಾಗಲೇ ಹಣಕಾಸು ಸಂಸ್ಥೆ/ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಸಹಾಯಧನವನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆ/ಬ್ಯಾಂಕ್ ಇವರು ಸರ್ಕಾರಕ್ಕೆ ಮರುಪಾವತಿ ಮಾಡುವಂತೆ ಸಂಬಂಧಪಟ್ಟ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರು ತಿಳುವಳಿಕೆ ನೀಡತಕ್ಕದ್ದು.

V. <u>ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು</u>

ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಕೈಗಾರಿಕಾ ಸಂಘ / ಸಂಸ್ಥೆ / ಟ್ರಸ್ಟ್ ಅಥವಾ ಶೇಕಡ 51 ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರನ್ನು ಒಳಗೊಂಡ ಇತರೆ ಸಂಘ/ಸಂಸ್ಥೆಗಳ ಕುಶಲ ಕರ್ಮಿಗಳು ಗುಡಿ ಕೈಗಾರಿಕೆಗೆ ಹಾಗೂ ನಿರುದ್ಯೋಗಿ ಯುವಕ / ಯುವತಿಯರಿಗೆ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳನ್ನು / ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ಕಟ್ಟಡ ನಿರ್ಮಾಣ ಮತ್ತು ಯಂತ್ರೋಪಕರಣ / ಉಪಕರಣಗಳ ಖರೀದಿಗೆ ಅನುದಾನವನ್ನು ಈ ಯೋಜನೆಯಡಿ ನೀಡಲಾಗುತ್ತದೆ. ಯೋಜನೆಯ ಮಾರ್ಗಸೂಚಿ ಈ ಕೆಳಕಂಡಂತೆ ಇರುತ್ತವೆ.

(ಎ) **ಸಂಘ ಸಂಸ್ಥೆಗಳ ಅರ್ಹತೆ/ಆಯ್ಕೆ ಮಾನದಂಡ:**

1. *ಸಂಘ / ಸಂಸ್ಥೆಗಳು ಕೋ-ಆಪರೇಟಿವ್ ಸೊಸೈಟಿ, ಕಾಯ್ದೆ 1957 / ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯಿದೆಯಂತೆ ನೊಂದಣಿಯಾಗಿರತಕ್ಕದ್ದು.*
2. *ಈ ಯೋಜನೆಯಡಿ ಸೌಲಭ್ಯ ಪಡೆಯಲು ಸಂಘ ಸಂಸ್ಥೆ / ಟ್ರಸ್ಟ್ ನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸದಸ್ಯರುಗಳು ಶೇ.50 ಕ್ಕಿಂತ ಹೆಚ್ಚು ಇರತಕ್ಕದ್ದು.*
3. *ಸದರಿ ಸಂಘ ಸಂಸ್ಥೆಯು ಕೈಗಾರಿಕಾ ಚಟುವಟಿಕೆ / ಕೌಶಲ್ಯಾಭಿವೃದ್ಧಿ ತರಬೇತಿಯಲ್ಲಿ ಸಂಪೂರ್ಣವಾಗಿ ತೊಡಗಿರತಕ್ಕದ್ದು.*

4. ಸಂಘ / ಸಂಸ್ಥೆಯಿಂದ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ / ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಲು ಸ್ವಂತ ಭೂಮಿ / ನಿವೇಶನವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

5. ಸಂಘ / ಸಂಸ್ಥೆಗಳು ತನ್ನ ಬೈ-ಲಾದಲ್ಲಿ ಕೈಗಾರಿಕೆಗೆ ಸಂಬಂಧಿಸಿದಂತೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವ ಬಗ್ಗೆ ಉದ್ದೇಶಗಳನ್ನು ಹೊಂದಿರಬೇಕು.

6. ಸಂಘ / ಸಂಸ್ಥೆಗಳು ಸ್ಥಾಪನೆಯಾಗಿ ಕನಿಷ್ಟ 2 ವರ್ಷ ಆಗಿರಬೇಕು. ತರಬೇತಿ ಹಾಗೂ ಇತರೆ ಚಟುವಟಿಕೆಗಳಲ್ಲಿ ಕಡ್ಡಾಯವಾಗಿ ತೊಡಗಿಕೊಂಡಿರಬೇಕು.

7. ಈ ಕಾರ್ಯಕ್ರಮದಡಿ ಅರ್ಹ ಸಂಘ-ಸಂಸ್ಥೆಗಳನ್ನು ಆಯ್ಕೆ ಮಾಡಲು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು. ಆಯ್ಕೆ ಸಮಿತಿ ಸಭೆಯ ನಡವಳಿಯನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

(ಬಿ) ಸಂಘ ಸಂಸ್ಥೆಗಳು ನೀಡಬೇಕಾದ ದಾಖಲಾತಿಗಳು:

1. ಭೂಮಿ/ನಿವೇಶನದ ದಾಖಲಾತಿ
2. ಸಂಘ/ಸಂಸ್ಥೆಗಳು ಸಂಬಂಧಪಟ್ಟ ಕಾಯಿದೆಯಡಿ ನೋಂದಣಿ ಮಾಡಿಕೊಂಡಿರುವ ಬಗ್ಗೆ ದಾಖಲಾತಿ ಇತ್ಯಾದಿ
3. ಸಂಘದ ಬೈ-ಲಾ ಪ್ರತಿ
4. ಈಗಾಗಲೇ ತರಬೇತಿ ನೀಡಿರುವ ಬಗ್ಗೆ ವರದಿ
5. ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ
6. ಕಟ್ಟಡದ ನಿರ್ಮಾಣ ಮಾಡಲು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮೋದನೆ ದಾಖಲಾತಿ/ ನಕ್ಷೆ ಇತ್ಯಾದಿ

(ಸಿ) ಯೋಜನೆಯಡಿ ಅನುದಾನದ ಮಿತಿ:

ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ಸಾಮಾನ್ಯ ಸೌಲಭ್ಯ ಕೇಂದ್ರಗಳ ಸ್ಥಾಪನೆಗೆ ಯೋಜನಾ ವೆಚ್ಚದ ಮೇಲೆ ಶೇ. 60ರಷ್ಟು ಅಥವಾ ಗರಿಷ್ಟ ರೂ. 20.00 ಲಕ್ಷಗಳವರೆವಿಗೂ ಈ ಕೆಳಕಂಡಂತೆ ಅನುದಾನ ಪಡೆಯಲು ಅರ್ಹವಿರುತ್ತದೆ.

1) **ಕಟ್ಟಡ ನಿರ್ಮಾಣ:** ಕಟ್ಟಡದ ವೆಚ್ಚದ ಶೇಕಡ 60 ರಷ್ಟು ಅಥವಾ ಗರಿಷ್ಟ ರೂ. 12.00 ಲಕ್ಷಗಳವರೆಗೂ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಉಳಿದ ಕಟ್ಟಡದ ವೆಚ್ಚವನ್ನು ಸಂಸ್ಥೆಯೇ ಸಂಪೂರ್ಣವಾಗಿ ಭರಿಸತಕ್ಕದ್ದು.

2) **ಯಂತ್ರೋಪಕರಣ / ಉಪಕರಣಗಳ ಖರೀದಿಗೆ:** ಯಂತ್ರೋಪಕರಣ / ಉಪಕರಣಗಳ ವೆಚ್ಚದ ಶೇ. 60 ರಷ್ಟು ಅಥವಾ ಗರಿಷ್ಟ ರೂ. 8.00 ಲಕ್ಷಗಳವರೆಗೂ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ನೀಡಲಾಗುವುದು. ಉಳಿದ ಯಂತ್ರೋಪಕರಣಗಳ ವೆಚ್ಚವನ್ನು ಸಂಸ್ಥೆಯೇ ಭರಿಸತಕ್ಕದ್ದು.

ಸಂಸ್ಥೆಯು ಪಾಲಿಸಬೇಕಾದ ಇತರ ನಿಬಂಧನೆಗಳು

1. ಕಟ್ಟಡದ ನಿರ್ಮಾಣವನ್ನು ತರಬೇತಿ ನೀಡಲು ಯೋಗ್ಯವಾಗಿರುವಂತೆ ನೈಪುಣ್ಯತೆ ಹೊಂದಿರುವ ಅಭಿಯಂತರರಿಂದ (Qualified Engineers) ಕಟ್ಟಡದ ಸಂಬಂಧಿಸಿದ ಆಯಾಯ ಯೋಜನೆಯನ್ನು ತಯಾರಿಸಿ ನಂತರವೇ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಕಟ್ಟಡ ನಿರ್ಮಾಣ ಮಾಡತಕ್ಕದ್ದು.

2. ಸಂಘ/ಸಂಸ್ಥೆಯ ತರಬೇತಿ ಕೇಂದ್ರ ಕಟ್ಟಡ ಹಾಗೂ ಯಂತ್ರೋಪಕರಣ/ ಉಪಕರಣಗಳಿಗೆ ಸ್ವಂತ ಮೂಲಗಳಿಂದ ಶೇ.40 ರಷ್ಟು ಬಂಡವಾಳ ಭರಿಸಿದಲ್ಲಿ ಸದರಿ ಆಸ್ತಿಯ ಮೇಲೆ ಮೊದಲನೇ ಚಾರ್ಜನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು. ಸಂಘ/ಸಂಸ್ಥೆಯು ಹಣಕಾಸು ಸಂಸ್ಥೆ / ಬ್ಯಾಂಕುಗಳಿಂದ ಸಾಲ ಪಡೆದಿದ್ದಲ್ಲಿ ಈ ಆಸ್ತಿಯ ಮೇಲೆ ಎರಡನೇ ಚಾರ್ಜನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ನೀಡತಕ್ಕದ್ದು.

3. ಸಂಘ/ಸಂಸ್ಥೆಯ ತರಬೇತಿ ಕೇಂದ್ರ / ಸಾಮಾನ್ಯ ಸೌಲಭ್ಯ ಕೇಂದ್ರದ ಕಟ್ಟಡದ ಮೇಲೆ ಸಂಘದ ಹೆಸರು ಹಾಗೂ ಯಾವ ಯೋಜನೆಯಡಿ ಸ್ಥಾಪನೆಯಾಗಿದೆಯೆಂದು ನಾಮಫಲಕದಲ್ಲಿ ಸೂಚಿಸತಕ್ಕದ್ದು.

4. ಯಾವುದೇ ಕಾರಣಕ್ಕೂ ಕಟ್ಟಡ ಮತ್ತು ಯಂತ್ರೋಪಕರಣ/ಉಪಕರಣಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಹೊರತುಪಡಿಸಿ ಇತರೆಯವರಿಗೆ ಬಾಡಿಗೆ / ಪರಭಾರೆ ಮಾಡಬಾರದು.

5. ಈ ಯೋಜನೆಯಲ್ಲಿ ಹಳೆಯ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಕಡ್ಡಾಯವಾಗಿ ಅವಕಾಶ ಇರುವುದಿಲ್ಲ.

6. ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ/ ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆಯಾದ ನಂತರ ಕನಿಷ್ಠ 10 ವರ್ಷಗಳ ಸತತವಾಗಿ ಗುಣ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳತಕ್ಕದ್ದು ಹಾಗೂ ಈ ಸಂಬಂಧ MOU ಮಾಡತಕ್ಕದ್ದು.

7. ಸರ್ಕಾರದ ವಿವಿಧ ಯೋಜನೆಗಳನ್ನು ನೀಡಲಾಗುವ ತರಬೇತಿ ಕಾರ್ಯಕ್ರಮ ನಿರಂತರವಾಗಿ ಹಮ್ಮಿಕೊಳ್ಳುವುದು.

8. ತರಬೇತಿ ಪಡೆದ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ/ಉದ್ಯೋಗಾವಕಾಶ ಕಡ್ಡಾಯವಾಗಿ ಕಲ್ಪಿಸತಕ್ಕದ್ದು.

9. ತರಬೇತಿ ಕಾರ್ಯಕ್ರಮಗಳು/ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದ ಮಾಹಿತಿಯನ್ನು ತರಬೇತಿ ಕೇಂದ್ರಗಳಲ್ಲಿ ಲಭ್ಯವಿರಬೇಕು ಹಾಗೂ ಇಲಾಖೆಯ ಅಧಿಕಾರಿಗಳಿಗೆ ಪರಿವೀಕ್ಷಣೆ ನಡೆಸಿದ ವೇಳೆಯಲ್ಲಿ ಮಾಹಿತಿ/ವಿವರಗಳನ್ನು ನೀಡುವುದು.

10. ತರಬೇತಿಗಾಗಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರರವರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಿ ತರಬೇತಿ ಕಾರ್ಯಕ್ರಮವನ್ನು ಪೂರೈಸುವುದು.

11. ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿರುವ ಸಂಬಂಧಪಟ್ಟ ಆಯಾಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇವರ ಮುಖಾಂತರ ತ್ರೈಮಾಸಿಕ ಪ್ರಗತಿ ವರದಿಯನ್ನು ಇಲಾಖೆಗೆ / ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

12. ಜಿಲ್ಲೆಯ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಲೆಕ್ಕಾಧಿಕಾರಿಗಳು ಅಥವಾ ಅವರ ಪ್ರತಿನಿಧಿ ಹಾಗೂ ಜಿಲ್ಲಾಧಿಕಾರಿಗಳ ಪ್ರತಿನಿಧಿ ರವರುಗಳನ್ನು ಹೊಂದಿರುವ ಒಂದು ಉಸ್ತುವಾರಿ ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು. ಸದರಿ ಸಮಿತಿಯು ಸಂಘಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳನ್ನು ಪಾಲಿಸುವ ಬಗ್ಗೆ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡತಕ್ಕದ್ದು ಹಾಗೂ ನಿಯಮಗಳನ್ನು ಪಾಲಿಸುತ್ತಿರುವ ಬಗ್ಗೆ ಪರಿಶೀಲನೆ ಹಾಗೂ ಉಸ್ತುವಾರಿ ವಹಿಸತಕ್ಕದ್ದು. ಸರ್ಕಾರದಿಂದ ಅನುಮೋದನೆಗೊಂಡ ಹಣ ಬಿಡುಗಡೆಯ ಪ್ರಸ್ತಾವನೆಯಲ್ಲಿ ಸದರಿ ಸಮಿತಿಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳ ಪಾಲನೆಯ ದೃಢೀಕರಣ ನೀಡತಕ್ಕದ್ದು.

13. ಸಂಘ/ಸಂಸ್ಥೆಯು ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಕ್ಕೆ ಅವಶ್ಯಕತೆ ಇರುವ ಗುಣಮಟ್ಟದ ಯಂತ್ರೋಪಕರಣಗಳು / ಉಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಾನುಸಾರ ಟೆಂಡರ್/ ಕೊಟೇಷನ್‌ಗಳನ್ನು ಆಹ್ವಾನಿಸಿ ಖರೀದಿ ಕ್ರಮ ಕೈಗೊಳ್ಳತಕ್ಕದ್ದು. **ಖರೀದಿಯಲ್ಲಿ ಕೆಟಿಪಿಪಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಸದರಿ ಉಸ್ತುವಾರಿ ಸಮಿತಿಯಿಂದ ದೃಢೀಕರಿಸಿ,** ದಾಖಲಾತಿಗಳನ್ನು ಇಲಾಖೆಗೆ / ಸರ್ಕಾರಕ್ಕೆ ಸಲ್ಲಿಸುವುದು.

14. ಯಂತ್ರೋಪಕರಣಗಳು/ಉಪಕರಣಗಳ ಖರೀದಿಗಾಗಿ ಇಲಾಖೆಯಿಂದ ಬಿಡುಗಡೆ ಮಾಡುವ ಅನುದಾನಕ್ಕೆ ಸರಿಸಮಾನವಾಗಿ (Prorata basis) ಸಂಸ್ಥೆಯವರು ಸಹ ಬಂಡವಾಳ ಹೂಡಿಕೆ ಮಾಡತಕ್ಕದ್ದು.

15. ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಂಜೂರಾತಿ ಪತ್ರದ ಪ್ರತಿ.

16. ಕಡ್ಡಾಯವಾಗಿ ಸರಬರಾಜುದಾರರಿಂದ ಸಂಸ್ಥೆಯವರು ಸದರಿ ಯಂತ್ರೋಪಕರಣ/ ಉಪಕರಣಗಳಿಗೆ ಖರೀದಿ ಸಮಯದಲ್ಲಿ Performance warranty ಪಡೆಯತಕ್ಕದ್ದು.

ಅನುದಾನ ಬಿಡುಗಡೆ ವಿಧಾನ:

ಅನುಮೋದಿತ ಯೋಜನೆಯನ್ವಯ ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆಗೊಳಿಸಲಾಗುವುದು.

ಅ) ಸಂಘ/ಸಂಸ್ಥೆಯವರು ಯೋಜನಾ ವೆಚ್ಚದ ಶೇ.40 ರಷ್ಟು ಸ್ವಂತ ಬಂಡವಾಳ ಹೂಡಿಕೆ ಮಾಡಿದಲ್ಲಿ ಆಸ್ತಿಯ ಮೇಲೆ 1ನೇ ಚಾರ್ಜ್‌ನ್ನು ಮಾರ್ಟ್‌ಗೇಜ್ ಡೀಡ್ ಮೂಲಕ ಇಲಾಖೆಗೆ ನೀಡತಕ್ಕದ್ದು. ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದಲ್ಲಿ ಸದರಿ ಸಂಸ್ಥೆಯಿಂದ ಸದರಿ ಆಸ್ತಿಯ ಮೇಲೆ 2ನೇ ಚಾರ್ಜ್‌ನ್ನು ಇಲಾಖೆಗೆ ನೀಡತಕ್ಕದ್ದು.

ಆ) ಅನುಮೋದಿತ ಕಟ್ಟಡ ನಿರ್ಮಾಣ ವೆಚ್ಚದ ಬಾಬ್ತಿನ ಶೇ.50 ರಷ್ಟು ಅನುದಾನವನ್ನು ಮೊದಲನೆ ಕಂತಾಗಿ ಮೇಲ್ಕಂಡಂತೆ ದಾಖಲಾತಿಗಳನ್ನು ಪಡೆದು ನಂತರವೇ ಮುಂಗಡವಾಗಿ ಬಿಡುಗಡೆ ಮಾಡಲಾಗುವುದು.

ಇ) ಸಂಘ/ಸಂಸ್ಥೆಯು ಸಹ ಕಟ್ಟಡ ನಿರ್ಮಾಣಕ್ಕಾಗಿ ತಗಲುವ ವೆಚ್ಚದಲ್ಲಿ ತನ್ನ ಪಾಲಿನ ವೆಚ್ಚದ ಶೇಕಡ 50 ರಷ್ಟು ಕಡ್ಡಾಯವಾಗಿ ಭರಿಸತಕ್ಕದ್ದು.

ಈ) ಮೊದಲ ಕಂತಿನ ಅನುದಾನದ ಜೊತೆಗೆ ಸಂಘ/ಸಂಸ್ಥೆಯವರು ಭರಿಸುವ ವೆಚ್ಚವನ್ನು ಸೇರಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಇವರ ದೃಢೀಕರಣದೊಂದಿಗೆ ಸಲ್ಲಿಸಿದ ನಂತರ ಕಟ್ಟಡದ ಅನುದಾನದ ಉಳಿಕೆ ಶೇಕಡ 50 ರಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಉ) ಸಂಘ/ಸಂಸ್ಥೆಯು ಕಟ್ಟಡದ 2ನೇ ಕಂತಿನ ಅನುದಾನದ ಜೊತೆಗೆ ತನ್ನ ಪಾಲಿನ ಉಳಿದ ಮೊತ್ತವನ್ನು ಭರಿಸಿ ಹಣ ಬಳಕೆ ದೃಢೀಕರಣ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಸಲ್ಲಿಸುವುದು. ಕಟ್ಟಡವು ಪೂರ್ಣಗೊಳಿಸಿದ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಕಂಪ್ಲೀಷನ್ ಸರ್ಟಿಫಿಕೇಟನ್ನು ಸಲ್ಲಿಸತಕ್ಕದ್ದು. ಆನಂತರ ಯಂತ್ರೋಪಕರಣ/ ಉಪಕರಣಗಳ ಖರೀದಿಸಲು ಮುಂಗಡ ಹಣಕ್ಕಾಗಿ ಕೋರಿಕೆ ಸಲ್ಲಿಸುವುದು.

ಊ) ಕಟ್ಟಡದ ನಿರ್ಮಾಣಕ್ಕೆ ಸಂಬಂಧಿಸಿದಂತೆ, Chartered Engineer ರವರಿಂದ ಮೌಲ್ಯ ದೃಢೀಕರಣ (Valuation Certificate) ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

ಋ) ಉಪಕರಣಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರಡಿ ರೂಪಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಅನುಮೋದಿತ ಯೋಜನೆಯನ್ವಯ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅನುದಾನ ಈ ಕೆಳಕಂಡಂತೆ ಬಿಡುಗಡೆಗೊಳಿಸಲಾಗುವುದು.

ಅ) ಸಂಸ್ಥೆಯು ನೀಡುವ ತರಬೇತಿ ಹಾಗೂ ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯವಾಗಿರುವ ಯಂತ್ರೋಪಕರಣಗಳ ಪಟ್ಟಿಯನ್ನು ಆಯ್ಕೆ ಸಮಿತಿಗೆ ಸಲ್ಲಿಸಿ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು. ಇವುಗಳಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಆಯ್ಕೆ ಸಮಿತಿಯ ಸಹಮತಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಆ) ಸಂಘ / ಸಂಸ್ಥೆಯು ಯಂತ್ರೋಪಕರಣ / ಉಪಕರಣಗಳನ್ನು ಖರೀದಿಸಲು ಇಲಾಖೆಯಿಂದ ಮುಂಗಡವಾಗಿ ಅನುದಾನ ಬಿಡುಗಡೆ ಮಾಡುವ ಬದಲು, ಸಂಘ / ಸಂಸ್ಥೆಯು ತನ್ನ ಪಾಲಿನ ಮೊತ್ತವನ್ನು ಅಂದರೆ ಶೇ.25 ರಷ್ಟು ಮೊತ್ತವನ್ನು ಯಂತ್ರೋಪಕರಣಗಳ ಸರಬರಾಜುದಾರರಿಗೆ ಮುಂಗಡವಾಗಿ ಪಾವತಿಸಿ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರಿಂದ ದೃಢೀಕರಿಸಿ ಮುಂಗಡ ಹಣ ಪಾವತಿ ರಶೀದಿ ಹಾಗೂ ಚೆಕ್ಕನ್ನು ವಿವರಗಳು ಸಲ್ಲಿಸಿದ ನಂತರ ಯಂತ್ರೋಪಕರಣಗಳ ಮೇಲೆ ಇಲಾಖೆ ವತಿಯಿಂದ ನೀಡಲಾಗುವ ಶೇ.75 ರಷ್ಟು ಅನುದಾನದಲ್ಲಿ ಮೊದಲನೇ ಕಂತಾಗಿ ಶೇ.75ರಷ್ಟನ್ನು Proforma Invoice ಪಡೆದು ಬಿಡುಗಡೆ ಮಾಡುವುದು.

ಇ) ನಂತರ ಸಂಘ / ಸಂಸ್ಥೆಯು ಸಂಪೂರ್ಣ ಯಂತ್ರೋಪಕರಣಗಳು / ಉಪಕರಣಗಳನ್ನು ಖರೀದಿಸಿ ಅಳವಡಿಸಿರುವುದನ್ನು ಜಂಟಿ ನಿರ್ದೇಶಕರು ದೃಢೀಕರಿಸಿದ ಮೇಲೆ ಇಲಾಖೆಯಿಂದ ಬಿಡುಗಡೆಗೆ ಬಾಕಿ ಇರುವ ಮುಂಗಡವಾದ ಅನುದಾನದ ಶೇ.25ರಷ್ಟು ಸಂಘ / ಸಂಸ್ಥೆಗೆ ಮರು ಪಾವತಿಸಲಾಗುವುದು.

ಸಂಘ/ಸಂಸ್ಥೆಯು ಈಗಾಗಲೇ ಸ್ವಂತ ಕಟ್ಟಡವನ್ನು ಹೊಂದಿದ್ದಲ್ಲಿ ಯಂತ್ರೋಕರಣ/ಉಪಕರಣಗಳ ಖರೀದಿಗಾಗಿ / ವೆಚ್ಚದ ಮೇಲೆ ಅನುದಾನ ಬಿಡುಗಡೆ ಬಗ್ಗೆ.

ಅ) ಸಂಸ್ಥೆಯು ಈಗಾಗಲೇ ಸ್ವಂತ ಕಟ್ಟಡ ಹೊಂದಿದ್ದಲ್ಲಿ ಕಟ್ಟಡದ ನಿವೇಶನದ ಕ್ರಯ ಪತ್ರದ ಪ್ರತಿ ಹಾಗೂ ಸಕ್ಷಮ ಪ್ರಾಧಿಕಾರದಿಂದ ಪಡೆದ ಅನುಮೋದಿತ ಕಟ್ಟಡದ ನೀಲಿ ನಕ್ಷೆ ಮತ್ತು ಕಟ್ಟಡ ನಿರ್ಮಾಣದ ಪರವಾನಗಿ ಪತ್ರ

ಆ) ಈಗಾಗಲೇ ಸಂಘ/ಸಂಸ್ಥೆಯು ಸ್ವಂತ ಕಟ್ಟಡವನ್ನು ಹೊಂದಿದ್ದು, ಯಂತ್ರೋಪಕರಣ/ಉಪಕರಣಗಳ ಖರೀದಿಯ ಒಟ್ಟು ವೆಚ್ಚಕ್ಕಾಗಿ ಸದರಿ ವೆಚ್ಚದ ಶೇ. 75ರಷ್ಟು ಅಥವಾ ಗರಿಷ್ಠ ರೂ.15.00 ಲಕ್ಷಗಳ ಅನುದಾನವನ್ನು ಪಡೆಯಲು ಅರ್ಹವಾಗಿರುತ್ತದೆ. ಯಂತ್ರೋಪಕರಣ/ಉಪಕರಣಗಳ ಅನುಮೋದಿತ ವೆಚ್ಚವನ್ನು ಈ ಕೆಳಕಂಡಂತೆ ಬಿಡುಗಡೆ ಮಾಡಲಾಗುವುದು. ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಕೈಕೇ ರವರು ಸದರಿ ಸಂಘ / ಸಂಸ್ಥೆಯು ಹಾಲಿ ಹೊಂದಿರುವ ಸ್ವಂತ ಕಟ್ಟಡವನ್ನು ಪರಿವೀಕ್ಷಿಸಿ ಸಂಘ/ಸಂಸ್ಥೆಯು ನೀಡುತ್ತಿರುವ ಕೌಶಲ್ಯಾಭಿವೃದ್ಧಿ ತರಬೇತಿ/ಸಾಮಾನ್ಯ ಸೌಲಭ್ಯ ಕೇಂದ್ರಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಯಂತ್ರೋಪಕರಣ/ಉಪಕರಣಗಳ ಸರಬರಾಜು ಆದೇಶದ ಮೇರೆಗೆ ಅನುಮೋದಿತ ವೆಚ್ಚದ ಸಂಘ / ಸಂಸ್ಥೆಯು ಯಂತ್ರೋಪಕರಣ / ಉಪಕರಣಗಳನ್ನು ಖರೀದಿಸಲು ಇಲಾಖೆಯಿಂದ ಮುಂಗಡವಾಗಿ ಅನುದಾನ ಬಿಡುಗಡೆ ಮಾಡುವ ಬದಲು, ಸಂಘ / ಸಂಸ್ಥೆಯು ತನ್ನ ಪಾಲಿನ ಮೊತ್ತವನ್ನು ಅಂದರೆ ಶೇ.25 ರಷ್ಟು ಮೊತ್ತವನ್ನು ಯಂತ್ರೋಪಕರಣಗಳ ಸರಬರಾಜುದಾರರಿಗೆ ಮುಂಗಡವಾಗಿ ಪಾವತಿಸಿ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರಿಂದ ದೃಢೀಕರಿಸಿ ಮುಂಗಡ ಹಣ ಪಾವತಿ ರಶೀದಿ ಹಾಗೂ ಚೆಕ್ಕನ್ನು ವಿವರಗಳು ಸಲ್ಲಿಸಿದ ನಂತರ ಯಂತ್ರೋಪಕರಣಗಳ ಮೇಲೆ ಇಲಾಖೆ ವತಿಯಿಂದ ನೀಡಲಾಗುವ ಶೇ.75 ರಷ್ಟು ಅನುದಾನದಲ್ಲಿ ಮೊದಲನೇ ಕಂತಾಗಿ ಶೇ.75ರಷ್ಟನ್ನು Proforma Invoice ಪಡೆದು ಬಿಡುಗಡೆ ಮಾಡುವುದು.

ಇ) ನಂತರ ಸಂಘ / ಸಂಸ್ಥೆಯು ಸಂಪೂರ್ಣ ಯಂತ್ರೋಪಕರಣಗಳು / ಉಪಕರಣಗಳನ್ನು ಖರೀದಿಸಿ ಅಳವಡಿಸಿರುವುದನ್ನು ಜಂಟಿ ನಿರ್ದೇಶಕರು ದೃಢೀಕರಿಸಿದ ಮೇಲೆ ಇಲಾಖೆಯಿಂದ ಬಿಡುಗಡೆಗೆ ಬಾಕಿ ಇರುವ ಮಂಜೂರಾದ ಅನುದಾನದ ಶೇ.25ರಷ್ಟು ಸಂಘ / ಸಂಸ್ಥೆಗೆ ಮರು ಪಾವತಿಸಲಾಗುವುದು.

ಈ) ಸದರಿ ಸಂಸ್ಥೆಯ ಯಂತ್ರೋಪಕರಣ/ಉಪಕರಣಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ 10 ವರ್ಷಗಳ 1ನೇ ಚಾರ್ಜ್‌ನ್ನು ಇಲಾಖೆಗೆ ನೀಡತಕ್ಕದ್ದು.

ಉ) ಯಾವುದೇ ಕಾರಣಕ್ಕೂ ಯಂತ್ರೋಪಕರಣ/ಉಪಕರಣಗಳನ್ನು ಇಲಾಖೆಗೆ ಹೊರತುಪಡಿಸಿ ಇತರೆಯವರಿಗೆ ಬಾಡಿಗೆ / ಪರಭಾರೆ ಮಾಡಲೇಬಾರದು.

ಊ) ಈ ಯೋಜನೆಯಡಿ ಹಳೇ ಯಂತ್ರೋಪಕರಣ/ಉಪಕರಣಗಳ ಖರೀದಿಗೆ ಅವಕಾಶ ಇರುವುದಿಲ್ಲ.

VI ಸಣ್ಣ /ಅತಿ ಸಣ್ಣ ಕೈಗಾರಿಕೆಗಳಿಗೆ "ಡಿ" ಮಾದರಿಯ ಮಳಿಗೆಯ ವೆಚ್ಚದ ಮೇಲೆ ರಿಯಾಯಿತಿ ದರದಲ್ಲಿ ಹಂಚಿಕೆ ಮಾಡುವ ಕಾರ್ಯಕ್ರಮಕ್ಕೆ ಪಾಲಿಸಬೇಕಾದ ಮಾರ್ಗಸೂಚಿಗಳು:

ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಸಣ್ಣ ಅತೀ ಸಣ್ಣ ಕೈಗಾರಿಕೆ ಸ್ಥಾಪಿಸಲು ಶೇ.90ರಷ್ಟು ರಿಯಾಯಿತಿ ದರದಲ್ಲಿ "ಡಿ" ಮಾದರಿಯ ಮಳಿಗೆಗಳನ್ನು ಕೆಎಸ್‌ಎಸ್‌ಐಡಿಸಿ ವತಿಯಿಂದ ಕೈಗಾರಿಕಾ ವಸಾಹಾತುವಿನಲ್ಲಿ ನಿರ್ಮಾಣ ಮಾಡಲು 2013-14 ಮತ್ತು 2014-15ನೇ ಸಾಲಿನಲ್ಲಿ ಚಾಮರಾಜನಗರ, ಚಿತ್ರದುರ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ 20, 24 ಮತ್ತು 40 ಡಿ ಮಾದರಿಯ ಮಳಿಗೆಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಂಡಿದೆ. ಸದರಿ ಯೋಜನೆಯನ್ನು ಹೆಚ್ಚಿನ ಎಸ್‌ಸಿ/ಎಸ್‌ಟಿ ಜನಸಂಖ್ಯೆ ಇರುವ ಇತರೆ ಎಲ್ಲಾ ಜಿಲ್ಲೆಗಳಲ್ಲೂ ಈ ಕಾರ್ಯಕ್ರಮ ವಿಸ್ತರಿಸಬಹುದಾಗಿದೆ.

ಯೋಜನೆಯ ರೂಪುರೇಷೆ :

1. ಈ ಯೋಜನೆಯಡಿ ಕೆಎಸ್‌ಎಸ್‌ಐಡಿಸಿ ರವರ ವಸಾಹಾತುವಿನಲ್ಲಿ ಪ್ರತ್ಯೇಕವಾಗಿ ಕನಿಷ್ಟ 1500 ಚದರಡಿ ನಿವೇಶನಗಳನ್ನು ನಿರ್ಮಿಸಿ 970 ಚದರಡಿ ವಿಸ್ತೀರ್ಣದ "ಡಿ" ಮಾದರಿಯ ಮಳಿಗೆಯನ್ನು ನಿರ್ಮಾಣ ಮಾಡಲು ಅವಕಾಶವಿರುತ್ತದೆ.
2. ನಿವೇಶನದ ಬೆಲೆಯನ್ನು ಒಳಗೊಂಡಂತೆ ಮಳಿಗೆಯ ನಿರ್ಮಾಣ ವೆಚ್ಚದ ಶೇ.90ರಷ್ಟು ರಿಯಾಯಿತಿಯನ್ನು ಸರ್ಕಾರದ ವತಿಯಿಂದ ಹಾಗೂ ಉಳಿದ ಶೇ.10ರಷ್ಟು ನಿರ್ಮಾಣ ವೆಚ್ಚವನ್ನು ಕೆಎಸ್‌ಎಸ್‌ಐಡಿಸಿ ಸಂಸ್ಥೆಯು ಭರಿಸಿ ಮಳಿಗೆ ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.
3. ಕೆಎಸ್‌ಎಸ್‌ಐಡಿಸಿ ರವರು ಸದರಿ ಮಳಿಗೆಗಳ ಸ್ವಾಧೀನವನ್ನು ಹಂಚಿಕೆದಾರರು (ಫಲಾನುಭವಿಗಳಿಗೆ) ನೀಡಿದ ನಂತರ ಮಳಿಗೆಯಲ್ಲಿ ಅವಶ್ಯಕತೆ ಇರುವ ಇತರೆ ಸೌಕರ್ಯಗಳನ್ನು ಫಲಾನುಭವಿಗಳು ಖುದ್ದಾಗಿ ಭರಿಸತಕ್ಕದ್ದು.

ಮಳಿಗೆಗಳ ಹಂಚಿಕೆ ವಿಧಾನ:

1) ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.

2) ಫಲಾನುಭವಿಯು ಕೈಗಾರಿಕಾ ಅಥವಾ ಸೇವಾ ಚಟುವಟಿಕೆಯಡಿ ಕೈಗಾರಿಕೆಯನ್ನು ಸ್ಥಾಪಿಸುವುದು.

3) ಕೆಎಸ್‌ಎಸ್‌ಐಡಿಸಿ ಯವರು ಮಳಿಗೆ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸುವುದು. ನಂತರ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಕೈಕೇ ರವರ ಅಧ್ಯಕ್ಷತೆಯಲ್ಲಿ ಈಗಾಗಲೇ ಇರುವ ಏಕಗವಾಕ್ಷಿಯ ಉಪ ಸಮಿತಿ ಸಭೆಯಲ್ಲಿ ಅರ್ಜಿಗಳನ್ನು ಮಂಡಿಸಿ, ಸಂದರ್ಶನದ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.

4) ಆಯ್ಕೆಗೊಂಡ ಫಲಾನುಭವಿಗಳ ಅರ್ಜಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ ಹಂಚಿಕೆಗಾಗಿ ಅನುಮೋದನೆ ಪಡೆಯುವುದು.

5) ಮಳಿಗೆ ಹಂಚಿಕೆಯಾದ 2 ವರ್ಷದೊಳಗೆ ಕೈಗಾರಿಕೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ತೆಗೆದುಕೊಳ್ಳದೇ ಇದ್ದಲ್ಲಿ, ಹಂಚಿಕೆಯನ್ನು ರದ್ದುಗೊಳಿಸಿ ಇತರೇ ಅರ್ಹ ಪರಿಶಿಷ್ಟ ಪಂಗಡಗಳ ಫಲಾನುಭವಿಗೆ ಮಾತ್ರ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ಮೂಲಕ ಹಂಚಿಕೆ ಮಾಡಲು ಕ್ರಮ ಕೈಗೊಳ್ಳುವುದು.

6) ಈಗಾಗಲೇ ಮಳಿಗೆಯ ವೆಚ್ಚವನ್ನು ನಿರ್ಧರಿಸಿದ್ದು, ಫಲಾನುಭವಿಯು ಶೇಕಡ 10 ರಷ್ಟನ್ನು ಮಾತ್ರ ಕೆಎಸ್‌ಎಸ್‌ಐಡಿಸಿ ಗೆ ಪಾವತಿಸಿ, ಮಳಿಗೆಯ ಸ್ವಾಧೀನವನ್ನು ಪಡೆಯುವುದು.

7) ಕೆಎಸ್‌ಎಸ್‌ಐಡಿಸಿ ಸಂಸ್ಥೆಯು ಇಲಾಖೆಯಿಂದ ನೀಡುವ ಶೇ.90 ರಷ್ಟು ರಿಯಾಯಿತಿ ಜೊತೆಗೆ ಉದ್ದಿಮೆದಾರರ ಪಾಲಿನ ವಂತಿಗೆಯನ್ನು (ಶೇ.10 ರಷ್ಟು ಮಾತ್ರ) ಪಡೆದು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಮಳಿಗೆ ಹಂಚಿಕೆ ವಿಷಯವನ್ನು ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯುವುದು.

8) ಕೆಎಸ್‌ಎಸ್‌ಐಡಿಸಿ ಸಂಸ್ಥೆಯು ಮಳಿಗೆ ಹಂಚಿಕೆಯಾದ ಉದ್ದಿಮೆದಾರರಿಗೆ ಸದರಿ ಮಳಿಗೆಗಳನ್ನು 15 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಡೀಡ್ ಮಾಡಿ ಫಲಾನುಭವಿಗೆ ಮಳಿಗೆಯನ್ನು ಹಸ್ತಾಂತರಿಸುವುದು. ಸದರಿ ಅವಧಿ ಮುಗಿದ ನಂತರ ಕೈಗಾರಿಕೆಯು ಸದರಿ ಹಂಚಿಕೆಯಾದ ಮಳಿಗೆಯಲ್ಲಿ ಚಾಲನೆಯಲ್ಲಿದ್ದಲ್ಲಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಒಪ್ಪಿಗೆ ಪಡೆದು ಶುದ್ಧ ಕ್ರಯ ಪತ್ರವನ್ನು (Absolute Sale Deed) ನೀಡಲು ಕೆಎಸ್‌ಎಸ್‌ಐಡಿಸಿ ರವರು ಕ್ರಮ ಕೈಗೊಳ್ಳುವುದು.

VII) ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ

<u>ಉದ್ದೇಶ:</u> ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ/ಆಧುನೀಕರಣ/ತಾಂತ್ರಿಕ ಉನ್ನತೀಕರಣ/ವಿಸ್ತರಣೆ/ಚಟುವಟಿಕೆ ಬದಲಾವಣೆ ಘಟಕಗಳಿಗೆ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಈ ಕೆಳಕಂಡಂತೆ ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿ ಮಾಡಬಹುದಾಗಿದೆ.

1) ರೂ.150.00 ಲಕ್ಷಗಳ ಯೋಜನಾ ವೆಚ್ಚದವರೆಗೂ – ಡೆಟ್ ಈಕ್ವಿಟಿ 2:1 ರಂತೆ, ಪ್ರವರ್ತಕರ ಬಂಡವಾಳ ಹೂಡಿಕೆಯ ಪಾಲಿನ ಶೇ.50 ರಷ್ಟು ಗರಿಷ್ಠ ರೂ.25.00 ಲಕ್ಷ
2) ರೂ.151.00 ರಿಂದ ರೂ.300.00 ಲಕ್ಷಗಳ ಯೋಜನಾ ವೆಚ್ಚದವರೆಗೂ – ಡೆಟ್ ಈಕ್ವಿಟಿ 2:1 ರಂತೆ, ಪ್ರವರ್ತಕರ ಬಂಡವಾಳ ಹೂಡಿಕೆಯ ಪಾಲಿನ ಶೇ.50 ರಷ್ಟು ಗರಿಷ್ಠ ರೂ.50.00 ಲಕ್ಷ
3) ರೂ.300.00 ಲಕ್ಷ ಮೇಲ್ಪಟ್ಟ ಯೋಜನಾ ವೆಚ್ಚದವರೆಗೂ – ಡೆಟ್ ಈಕ್ವಿಟಿ 2:1 ರಂತೆ ಪ್ರವರ್ತಕರ ಬಂಡವಾಳ ಹೂಡಿಕೆಯ ಪಾಲಿನ ಶೇ.50 ರಷ್ಟು ಗರಿಷ್ಠ ರೂ.75.00 ಲಕ್ಷ (ಈ ಸೌಲಭ್ಯವನ್ನು ಅತಿಸಣ್ಣ/ಸಣ್ಣ ಪ್ರಮಾಣದ ಕೈಗಾರಿಕೆಗಳ ಅರ್ಹತೆಗೆ ಒಳಪಟ್ಟಂತೆ)

4) ಪಿ.ಎಂ.ಇ.ಜಿ.ಪಿ. ಯೋಜನೆಯಡಿಯಲ್ಲಿ ಅಥವಾ ಇನ್ನಿತರೆ ಯೋಜನೆಯಡಿಯಲ್ಲಿ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಯೋಜನಾ ವೆಚ್ಚದ ಶೇ.90 ಕ್ಕಿಂತ ಹೆಚ್ಚಿನ ಸಾಲ ಪಡೆದ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುವುದಿಲ್ಲ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದ ಏಜೆನ್ಸಿಯಾಗಿರುತ್ತದೆ. ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರು ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯಕ್ಕಾಗಿ ನಿಗದಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ವಿವರವಾಗಿ ಪರಿಶೀಲಿಸಿ ಸಂಬಂಧಪಟ್ಟ ದಾಖಲಾತಿಗಳನ್ನು ದೃಢೀಕರಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಇಲಾಖೆಯ ಪರಿಶೀಲನಾ ಸಭೆಗೆ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿಗಾಗಿ ಸಲ್ಲಿಸಬೇಕಾಗಿರುತ್ತದೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲನಾ ಸಭೆಯಲ್ಲಿ ಪರಿಶೀಲಿಸಿ ಮಂಜೂರಾತಿಗೆ ಶಿಫಾರಸ್ಸು ಮಾಡಬೇಕಾಗಿರುತ್ತದೆ.

ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ – ಪರಿಶೀಲನಾ ಸಮಿತಿ:

1. ಅಧಿಕ ನಿರ್ದೇಶಕರು(ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಅಧ್ಯಕ್ಷರು
2. ಮುಖ್ಯ ಸಲಹೆಗಾರರು ಹಾಗೂ ಮುಖ್ಯ ನಿರ್ವಹಣಾಧಿಕಾರಿಗಳು ಟೆಕ್ಸಾಕ್ – ಸದಸ್ಯರು
3. ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್ಐಐಡಿಸಿ/ಪ್ರತಿನಿಧಿ – ಸದಸ್ಯರು
4. ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್ಎಫ್ಸಿ/ಪ್ರತಿನಿಧಿ – ಸದಸ್ಯರು
5. ವ್ಯವಸ್ಥಾಪಕ ನಿರ್ದೇಶಕರು, KITVIN/KAMCO/ಪ್ರತಿನಿಧಿ – ಸದಸ್ಯರು
6. ಜಂಟಿ ನಿರ್ದೇಶಕರು (ಕೈಅ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಸದಸ್ಯರು
7. ಸಂಚಾಲಕರು ಮತ್ತು ಪ್ರಧಾನ ವ್ಯವಸ್ಥಾಪಕರು, SLBC, ಸಿಂಡಿಕೇಟ್ ಬ್ಯಾಂಕ್, ಪ್ರಾದೇಶಿಕ ಕಛೇರಿ, ಬೆಂಗಳೂರು – ಸದಸ್ಯರು
8. ಉಪ ನಿರ್ದೇಶಕರು (ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಸದಸ್ಯ ಕಾರ್ಯದರ್ಶಿ

ಪರಿಶೀಲನಾ ಸಭೆಯಲ್ಲಿ ಶಿಫಾರಸ್ಸಾದ ಘಟಕಗಳಿಗೆ ವಿವರವಾಗಿ ಪರಿಶೀಲಿಸಿ ಮಂಜೂರಾತಿ ಸಭೆಯು ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಮಂಜೂರಾತಿಗೆ ಈ ಕೆಳಕಂಡ ಸಮಿತಿಯಲ್ಲಿ ವಿವರವಾಗಿ ಘಟಕವಾರು ಚರ್ಚಿಸಿ/ಪರಿಶೀಲಿಸಿ ಮಂಜೂರಾತಿ ಮಾಡಲಾಗುವುದು.

ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ – ಮಂಜೂರಾತಿ ಸಮಿತಿ:

1. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಅಧ್ಯಕ್ಷರು
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ/ಪ್ರತಿನಿಧಿ – ಸದಸ್ಯರು
3. ನಿರ್ದೇಶಕರು, ಪ.ಪಂ. ಕಲ್ಯಾಣ ಇಲಾಖೆ/ಪ್ರತಿನಿಧಿ – ಸದಸ್ಯರು
4. ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್ಐಐಡಿಸಿ/ಪ್ರತಿನಿಧಿ – ಸದಸ್ಯರು
5. ಕಾರ್ಯನಿರ್ವಾಹಕ ನಿರ್ದೇಶಕರು, ಕೆಎಸ್ಎಫ್ಸಿ/ಪ್ರತಿನಿಧಿ – ಸದಸ್ಯರು
6. ವ್ಯವಸ್ಥಾಪಕ ನಿರ್ದೇಶಕರು, KITVIN/KAMCO/ಪ್ರತಿನಿಧಿ – ಸದಸ್ಯರು
7. ಸಂಚಾಲಕರು ಮತ್ತು ಪ್ರಧಾನ ವ್ಯವಸ್ಥಾಪಕರು, SLBC, ಸಿಂಡಿಕೇಟ್ ಬ್ಯಾಂಕ್, ಪ್ರಾದೇಶಿಕ ಕಛೇರಿ, ಬೆಂಗಳೂರು – ಸದಸ್ಯರು
8. ಅಧಿಕ ನಿರ್ದೇಶಕರು (ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಸದಸ್ಯ ಕಾರ್ಯದರ್ಶಿ

ಅರ್ಹತೆ: **ಈ ಯೋಜನೆಯಡಿ ಸೌಲಭ್ಯ ಪಡೆಯಲು ಕೆಳಕಂಡಂತೆ ಅರ್ಹತೆಯನ್ನು ಹೊಂದಿರತಕ್ಕದ್ದು.**

ಅ) ಪ.ಜಾ/ಪ.ಪಂ. ಉದ್ದಿಮೆದಾರರು ಮಾಲಿಕತ್ವ/ ಪಾಲುದಾರಿಕೆ/ ಟ್ರಸ್ಟ್/ ಸಂಘ/ ಕಂಪನಿಗಳಲ್ಲಿ ಸ್ಥಾಪಿಸುವ ಘಟಕಗಳಲ್ಲಿ ಎಲ್ಲಾ ಪಾಲುದಾರರು/ ಸದಸ್ಯರು/ ನಿರ್ದೇಶಕರು ಪ.ಜಾ/ಪ.ಪಂ. ವರ್ಗಕ್ಕೆ ಸೇರಿರತಕ್ಕದ್ದು.

ಆ) ಈ ಯೋಜನೆಯಡಿಯಲ್ಲಿ ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳು ಹೊಸ/ಆಧುನೀಕರಣ/ತಾಂತ್ರಿಕ ಉನ್ನತೀಕರಣ/ ವಿಸ್ತೀರ್ಣ/ಚಟುವಟಿಕೆ ಬದಲಾವಣೆ ಮಾಡಿದಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ಪಡೆಯಬಹುದಾಗಿದೆ.

ಇ) ಈ ಯೋಜನೆಯಡಿಯಲ್ಲಿ ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅತಿ ಸಣ್ಣ ಮತ್ತು ಸಣ್ಣ ಸೇವಾ ಘಟಕಗಳು ಸ್ಥಿರಾಸ್ತಿ ಮೇಲೆ ಬಂಡವಾಳ ಹೂಡಿದಲ್ಲಿ ಸಹಾಯ ಪಡೆಯಲು ಅರ್ಹರಾಗಿರುತ್ತಾರೆ.

ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಮೂಲಕ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು:

1) ನಿಗಧಿತ ನಮೂನೆಯಲ್ಲಿ ಅರ್ಜಿ
2) IEM Part-1 / Part-2
3) ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರದ ಪ್ರತಿ
4) ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪತ್ರ ಮತ್ತು ಅಪ್ರೈಸಲ್ ವರದಿಯ ಪ್ರತಿಗಳು
5) ಮೊದಲನೇ ಕಂತಿನ ಸಾಲ ಬಿಡುಗಡೆ ಬಗ್ಗೆ ದಾಖಲಾತಿ

ನೋಡಲ್ ಏಜೆನ್ಸಿ :

ಈ ಯೋಜನೆಯಡಿಯಲ್ಲಿ ಕೆ.ಎಸ್.ಎಫ್.ಸಿ. ಬೆಂಗಳೂರು ರವರು ನೋಡಲ್ ಏಜೆನ್ಸಿ ಆಗಿರುತ್ತಾರೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಆಯವ್ಯಯದಲ್ಲಿ ಒದಗಿಸಿದ ಅನುದಾನವನ್ನು ಡ್ರಾ ಮಾಡಿ ಕೆ.ಎಸ್.ಎಫ್.ಸಿ. ಬೆಂಗಳೂರು ಇಲ್ಲಿ ಠೇವಣಿ ಇಡಲಾಗುವುದು. ಇಲಾಖೆಯಿಂದ **ಎಸ್.ಎಸ್.ಸಿ.ಎ** (ಸಾಫ್ಟ್ ಸೀಡ್ ಕ್ಯಾಪಿಟಲ್ ಅಸಿಸ್ಟೆನ್ಸ್) ಮಂಜೂರಾದ ಘಟಕಗಳಿಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರು ನಿಗದಿಪಡಿಸಿರುವ ದಸ್ತಾವೇಜುಗಳನ್ನು ಪಡೆದು ಬಿಡುಗಡೆ ಕೋರಿಕೆ ಸಲ್ಲಿಸಿದ ಮೇರೆಗೆ ಕೆ.ಎಸ್.ಎಫ್.ಸಿ. ಬೆಂಗಳೂರು ರವರು ಸಾಲ ಮಂಜೂರು ಮಾಡಿರುವ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಘಟಕದ ಖಾತೆಗಳಿಗೆ ಸದರಿ ಹಣವನ್ನು ಬಿಡುಗಡೆಗೊಳಿಸುವುದು.

ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮಂಜೂರಾದ ನಂತರ ಬಿಡುಗಡೆಗಾಗಿ ಘಟಕದವರು ಈ ಕೆಳಕಂಡ ದಸ್ತಾವೇಜುಗಳನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ದವರಿಗೆ ಸಲ್ಲಿಸುವುದು:

1) ರೂ.200/- ಛಾಪಾ ಕಾಗದದ ಮೇಲೆ ಒಪ್ಪಂದ ಪತ್ರ (Agreement Deed)
2) ರೂ.200/- ಛಾಪಾ ಕಾಗದದ ಮೇಲೆ Deed of Guarantee

3) ಬ್ಯಾಂಕ್/ಹಣಕಾಸು ಸಂಸ್ಥೆಗಳೊಂದಿಗೆ ಇಲಾಖೆ ಪರವಾಗಿ ಸಂಬಂಧಪಟ್ಟ ಜಂಟಿ ನಿರ್ದೇಶಕರು ಒಡಂಬಡಿಕೆ ಮಾಡುವುದು (MOU)
4) ಬ್ಯಾಂಕ್/ಹಣಕಾಸು ಸಂಸ್ಥೆ ವತಿಯಿಂದ ಘಟಕದ ಸ್ಥಿರಾಸ್ತಿ ಮೇಲೆ ಇಲಾಖೆಗೆ 2ನೇ ಚಾರ್ಜ್ ನೀಡುವುದು. (Memorandum of Entry)

ಮೇಲ್ಕಂಡ ದಸ್ತಾವೇಜುಗಳನ್ನು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರು ತಮ್ಮ ಕಛೇರಿಯ ಭದ್ರತಾ ಕೊಠಡಿಯಲ್ಲಿ ದಾಸ್ತಾನು ಮಾಡಿ, ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳೊಂದಿಗೆ ಸಮಾಲೋಚಿಸಿ, ಕಾಲಕಾಲಕ್ಕೆ ವಸೂಲಾತಿ ಕ್ರಮ ವಹಿಸತಕ್ಕದ್ದು.

ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮರುಪಾವತಿ ವಿಧಾನ:

1) ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯ ಮೊತ್ತವು ಬಡ್ಡಿರಹಿತ ಸಾಲವಾಗಿರುತ್ತದೆ. ಆದರೆ ಮರುಪಾವತಿಗೆ ಬಾಕಿ ಇರುವ ಮೊತ್ತದ ಮೇಲೆ ಶೇ.1 ರಷ್ಟು ಸೇವಾ ಶುಲ್ಕವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆ ಯವರು ಸಂಬಂಧಪಟ್ಟ ಘಟಕಗಳಿಗೆ ವಿಧಿಸುವುದು.
2) ಸಾಲ ಬಿಡುಗಡೆ ಮಾಡಿದ ದಿನಾಂಕ ದಿಂದ 04 ವರ್ಷಗಳವರೆಗೂ Moratorium ಅವಧಿಯಾಗಿರುತ್ತದೆ. ನಂತರ 5 ವರ್ಷಗಳಲ್ಲಿ 20 ತ್ರೈಮಾಸಿಕ ಸಮ ಕಂತುಗಳಲ್ಲಿ ಈ ಸಾಲವನ್ನು ಮರು ಪಾವತಿ ಮಾಡಬೇಕಾಗಿರುತ್ತದೆ. ಈ ಸೌಲಭ್ಯವನ್ನು ಸರ್ಕಾರದ ಮಾರ್ಗಸೂಚಿ ಸಂಖ್ಯೆ ಸಿಐ 106 ಸಿಎಸ್‌ಸಿ 2009 ದಿನಾಂಕ 21.01.2010 ಪ್ರಕಾರ ಮಂಜೂರಾದ ಘಟಕಗಳಿಗೂ ಸಹ ಅನ್ವಯಿಸುತ್ತದೆ.
3) ಮರುಪಾವತಿ ಮಾಡಿದ ಸಾಫ್ಟ್ ಸೀಡ್ ಕ್ಯಾಪಿಟಲ್ ಸಾಲದ ಮೊತ್ತವನ್ನು ಬ್ಯಾಂಕ್/ಹಣಕಾಸು ಸಂಸ್ಥೆ ರವರು ರಾಜ್ಯ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡತಕ್ಕದ್ದು ಹಾಗೂ ಪ್ರತಿ ತ್ರೈಮಾಸಿಕದಲ್ಲಿ DCB ವರದಿಯನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರದವರಿಗೆ ಕಳುಹಿಸಿಕೊಡುವುದು.
4) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರು ಮಂಜೂರಾದ ಸಾಫ್ಟ್ ಸೀಡ್ ಕ್ಯಾಪಿಟಲ್ ಸಹಾಯದ ವಿವರಗಳನ್ನು ದಸ್ತಾವೇಜಿನಲ್ಲಿ ದಾಖಲಿಸಿ, ಮರುಪಾವತಿ ಮೇಲುಸ್ತುವಾರಿ ವಹಿಸಿ ಪ್ರತಿ ತ್ರೈಮಾಸಿಕಕ್ಕೆ DCB ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
5) ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆ ಯವರು ಉದ್ದಿಮೆದಾರರಿಗೆ ನೀಡಿರುವ ಸಾಲದ ಕಂತಿನ ವಸೂಲಾತಿ ಜೊತೆಗೆ ಇಲಾಖೆಯಿಂದ ನೀಡಿರುವ ಸಾಫ್ಟ್ ಸೀಡ್ ಕ್ಯಾಪಿಟಲ್ ಕಂತನ್ನು ಸಹ ವಸೂಲು ಮಾಡುವುದು.
6) ಒಂದು ವೇಳೆ ಬ್ಯಾಂಕ್/ಹಣಕಾಸು ಸಂಸ್ಥೆ ಯವರು ನೀಡಿರುವ ಸಾಲದ ಮರುಪಾವತಿಯನ್ನು ಮುಂದೂಡಿದಲ್ಲಿ ಅಥವಾ ಬದಲಾವಣೆ ಮಾಡಿದಲ್ಲಿ ಸಾಫ್ಟ್ ಸೀಡ್ ಕ್ಯಾಪಿಟಲ್ ಮರುಪಾವತಿಯನ್ನು ಕೂಡ ಅದರಂತೆ ಬದಲಾಯಿಸತಕ್ಕದ್ದು.

VIII) **ಇಲಾಖೆಯ ಸಂಸ್ಥೆಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು ಕಾರ್ಯಕ್ರಮದ ಮಾರ್ಗಸೂಚಿಗಳು.**

2014-15ನೇ ಸಾಲಿನಿಂದ ಜಾರಿಗೆ ಬರುವಂತೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ನಿಗಮ ಮತ್ತು ಮಂಡಳಿಗಳಲ್ಲಿ ಮೂಲಭೂತ ಸೌಕರ್ಯವನ್ನು ಬಲಪಡಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ

ಪಂಗಡದ ಫಲಾನುಭವಿಗಳಿಗೆ ಆಧುನಿಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ, ಉದ್ಯೋಗಾವಕಾಶ ಕಲ್ಪಿಸಿ, ಅವರ ಆರ್ಥಿಕ ಮತ್ತು ಸಾಮಾಜಿಕ ಮಟ್ಟವು ಸುಧಾರಿಸುವ ಸಲುವಾಗಿ ಸಂಸ್ಥೆಗಳಿಗೆ ಆಧುನಿಕ ಯಂತ್ರೋಪಕರಣಗಳು/ಉಪಕರಣಗಳನ್ನು ಖರೀದಿಸಿ ಅಳವಡಿಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಲು, ತಯಾರಿಸುವ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಹೆಚ್ಚಿನ ಆದಾಯ ವೃದ್ಧಿಸುವುದು ಹಾಗೂ ಕೌಶಲ್ಯವನ್ನು ಹೆಚ್ಚಿಸಿದಂತಾಗುತ್ತದೆ. ಆದುದರಿಂದ ಪ್ರಸಕ್ತ ಸಾಲಿನಲ್ಲಿ ಇಲಾಖೆಯಡಿ ಇರುವ ನಿಗಮ ಮತ್ತು ಮಂಡಳಿಗಳಾದ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಮಹಾ ಮಂಡಳಿ ಹಾಗೂ ಕಿಲ್ಪ್ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯವನ್ನು ಅನುದಾನದ ರೂಪದಲ್ಲಿ ಮಂಜೂರು ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಆದುದರಿಂದ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕೆಳಕಂಡಂತೆ ಮಾರ್ಗಸೂಚಿಗಳನ್ನು ರಚಿಸಲಾಗಿದೆ.

1) ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಸ್ವಂತ ಭೂಮಿ ಮತ್ತು ಕಟ್ಟಡ ಇದ್ದಲ್ಲಿ ಹಾಲಿ ಇರುವ ಮೂಲಭೂತ ಸೌಕರ್ಯಗಳ ಜೊತೆಗೆ ತರಬೇತಿಗೆ ಅವಶ್ಯಕತೆ ಇರುವ ಹೆಚ್ಚುವರಿ ಕಟ್ಟಡ ನಿರ್ಮಾಣ ಹಾಗೂ ಆಧುನಿಕ ಯಂತ್ರೋಪಕರಣಗಳು/ ಉಪಕರಣಗಳನ್ನು ಖರೀದಿಸಿ ಅಳವಡಿಸಲು ಅವಕಾಶವಿರುತ್ತದೆ.

2) ಸದರಿ ಮೂಲಭೂತ ಸೌಕರ್ಯದ ಅನುಕೂಲವು ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ದೊರೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಸಂಸ್ಥೆಯದ್ದಾಗಿರುತ್ತದೆ.

3) ಸಂಸ್ಥೆಯಿಂದ ತರಬೇತಿಗಾಗಿ ಕಟ್ಟಡ ನಿರ್ಮಾಣದ ಅವಶ್ಯಕತೆ ಇದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಕಟ್ಟಡದ ನೀಲಿ ನಕ್ಷೆ ಹಾಗೂ ಚಾರ್ಟರ್ಡ್ ಸಿವಿಲ್ ಇಂಜಿನಿಯರ್‌ರವರಿಂದ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಅನುದಾನ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸುವುದು.

4) ಸಂಸ್ಥೆಯು ಅವಶ್ಯಕತೆಯಿರುವ ಯಂತ್ರೋಪಕರಣ/ ಉಪಕರಣಗಳನ್ನು ಗುರುತಿಸಿ, ಅದನ್ನು ಖರೀದಿಸಿ ಅಳವಡಿಸುವುದರಿಂದ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಇದರಿಂದ ಉದ್ಯೋಗ ಹಾಗೂ ಆದಾಯ ಹೆಚ್ಚಿಸಿದಂತಾಗುವುದು ಎಂಬುದರ ಮಾಹಿತಿಯೊಂದಿಗೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.

5) ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ಇಲಾಖೆಯು ಯಂತ್ರೋಪಕರಣ/ಉಪಕರಣಗಳ ಖರೀದಿಗಾಗಿ ಕೆಟಿಪಿಪಿ ಕಾಯಿದೆಯನ್ವಯ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಸಂಬಂಧಪಟ್ಟ ಸಂಸ್ಥೆಗೆ ಅನುಮತಿ ನೀಡಲಾಗುವುದು.

6) ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಟೆಂಡರ್‌ನಲ್ಲಿ L1 ಸರಬರಾಜುದಾರರು ಸಲ್ಲಿಸಿರುವ ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲು ಸಂಸ್ಥೆಯು ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು.

7) ಸಂಸ್ಥೆಯವರು ಯಂತ್ರೋಪಕರಣ/ಉಪಕರಣಗಳನ್ನು ಖರೀದಿಸಿದ ನಂತರ ತರಬೇತಿ/ಉತ್ಪಾದನಾ ಕೇಂದ್ರಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ತರಬೇತಿ/ ಉತ್ಪಾದನಾ ಕೇಂದ್ರಗಳಲ್ಲಿ ಉದ್ಯೋಗ ಕಲ್ಪಿಸಿದ ಬಗ್ಗೆ ವಿವರವಾದ ವರದಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸುವುದು.

IX) ಖಾದಿ ನೇಕಾರರಿಗೆ ಉಚಿತ ಚರಕಗಳ ಸರಬರಾಜು

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ವತಿಯಿಂದ ಗುರುತಿಸಿದ ಪ.ಜಾ/ಪ.ಪಂ. ದ ಖಾದಿ ನೇಕಾರರಿಗೆ ಉಚಿತ ಖಾದಿ ಚರಕಗಳನ್ನು ನೀಡಲು ಅರ್ಜಿ, ಜಾತಿ ಪ್ರಮಾಣ ಪತ್ರ, ಭಾವಚಿತ್ರ ವನ್ನು ಪಡೆದು ಉಚಿತ ಚರಕಗಳ ಸರಬಾಜಿಗಾಗಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸುವುದು. ಪ್ರತಿ ಫಲಾನುಭವಿಗೆ ರೂ. 13,500-00 ಮೌಲ್ಯದ ಚರಕವನ್ನು ಉಚಿತವಾಗಿ ಮಂಜೂರು ಮಾಡಬಹುದಾಗಿದೆ.

22.07.2015

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 129 ಸಿಎಸ್‌ಸಿ 2015, ದಿನಾಂಕ: 22.07.2015ರ

ಅನುಬಂಧ – 2

ಹೊಸ ಕಾರ್ಯಕ್ರಮಗಳು

I. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ

II. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 3 ದಿನಗಳ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ (EDP)

III. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಖಾಸಗಿ ಕೈಗಾರಿಕಾ ವಸಾಹತು ಸ್ಥಾಪನೆಗೆ ಶೇ.50 ರಷ್ಟು ಮೂಲಭೂತ ಸೌಕರ್ಯಕ್ಕಾಗಿ ಅನುದಾನ

IV. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಘ/ಸಂಸ್ಥೆ/ಟ್ರಸ್ಟ್ ಮಧ್ಯಮ ಮತ್ತು ಬೃಹತ್ ಉದ್ದಿಮೆ ಸ್ಥಾಪನೆಗಾಗಿ ಅನುದಾನ

I) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ತಮ್ಮ ಕೈಗಾರಿಕೆ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು / ಆಧುನಿಕ / ತಾಂತ್ರಿಕ ನೈಪುಣ್ಯತೆ ಹೊಂದಲು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಕವಾಗಿ ಇತರ ರಾಜ್ಯಗಳು /ಹೊರದೇಶಗಳಿಗೆ ಅಧ್ಯಯನ ಪ್ರವಾಸಕ್ಕೆ ತಗಲುವ ವೆಚ್ಚವನ್ನು ಸರ್ಕಾರದ ವತಿಯಿಂದ ಈ ಕೆಳಕಂಡಂತೆ ಮಿತಿಗೊಳಿಸಿ ಮಂಜೂರು ಮಾಡಬಹುದಾಗಿದೆ.

ಅ) ಅಧ್ಯಯನ ಪ್ರವಾಸವನ್ನು ಇತರೆ ರಾಜ್ಯಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ತಗಲುವ ವೆಚ್ಚದ ಶೇ. 90 ರಷ್ಟು ಅಥವಾ ಗರಿಷ್ಟ ರೂ.15,000/-. ಯಾವುದು ಕಡಿಮೆ ಇರುತ್ತದೆಯೋ ಆ ಮೊತ್ತವನ್ನು ಮಂಜೂರು ಮಾಡಬಹುದಾಗಿದೆ.

ಆ) ಅಧ್ಯಯನ ಪ್ರವಾಸವನ್ನು ಹೊರದೇಶಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ತಗಲುವ ವೆಚ್ಚದ ಶೇ. 90 ರಷ್ಟು ಅಥವಾ ಗರಿಷ್ಟ ರೂ. 1,00,000/-. ಯಾವುದು ಕಡಿಮೆ ಇರುತ್ತದೆಯೋ ಆ ಮೊತ್ತವನ್ನು ಮಂಜೂರು ಮಾಡಬಹುದಾಗಿದೆ.

ಅರ್ಹತೆ:

1) ಉದ್ದಿಮೆದಾರರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರತಕ್ಕದ್ದು.
2) ಕೈಗಾರಿಕಾ ಉದ್ದಿಮೆದಾರರು ಕನಿಷ್ಟ 03 ವರ್ಷಗಳ ಹಿಂದೆ ಪ್ರಾರಂಭಿಸಿದ್ದು ಹಾಲಿ ಚಾಲ್ತಿಯಲ್ಲಿ ಇರತಕ್ಕದ್ದು.
3) ಒಂದು ಅಧ್ಯಯನ ಪ್ರವಾಸ ತಂಡದಲ್ಲಿ ಕನಿಷ್ಟ 10 ಉದ್ದಿಮೆದಾರರು ಇರತಕ್ಕದ್ದು.
4) ಪ್ರವಾಸದ ಅವಧಿಯು ಕನಿಷ್ಟ 03 ದಿನ ಹಾಗೂ ಗರಿಷ್ಟ 07 ದಿನಗಳ ಅವಧಿ ಇರತಕ್ಕದ್ದು.
5) ಒಬ್ಬ ಕೈಗಾರಿಕೋದ್ಯಮಿದಾರರು ಹೊರ ರಾಜ್ಯದ ಗರಿಷ್ಟ 02 ಬಾರಿ ಹಾಗೂ ಹೊರ ದೇಶಕ್ಕೆ 01 ಅಧ್ಯಯನ ಪ್ರವಾಸ / ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಅಧ್ಯಯನ ಪ್ರವಾಸಕ್ಕೆ ನೀಡುವ ಸಹಾಯಧನ ಬಿಡುಗಡೆ ವಿಧಾನ :

1) ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕೆ ಕೇಂದ್ರ ರವರಿಂದ ಅಧ್ಯಯನ ಪ್ರವಾಸಕ್ಕೆ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಸಲ್ಲಿಸಿದ ಮೇರೆಗೆ ಸರ್ಕಾರದಿಂದ ಮಂಜೂರಾತಿ ಪಡೆಯಬಹುದಾಗಿದೆ.

2) ಮಂಜೂರಾತಿ ನೀಡಿದ ನಂತರ ಅಧ್ಯಯನ ಪ್ರವಾಸ ಕೈಗೊಂಡ ನಂತರ ಪ್ರವಾಸದ ವೆಚ್ಚದ ವಿವರಗಳನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರವರಿಂದ ವೆಚ್ಚದ ಬಿಲ್ಲು ವೋಚರ್ ಇತ್ಯಾದಿಗಳನ್ನು ಪರಿಶೀಲಿಸಿ, ದೃಢೀಕರಿಸಿ ಅರ್ಹ ಅನುದಾನ ಬಿಡುಗಡೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.

3) ಅನುದಾನ ಬಿಡುಗಡೆ ನಂತರ ನಿಗಧಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಿಎ ರವರಿಂದ ದೃಢೀಕರಿಸಿ ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕೆ ಕೇಂದ್ರ ಮೇಲು ಸಹಿ ಮಾಡಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

II) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ 3 ದಿನಗಳ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ (EDP)

ಅತೀ ಸಣ್ಣ / ಕೈಗಾರಿಕಾ ಸೇವಾ ಚಟುವಟಿಕೆಗಳು ಯೋಜನಾ ವೆಚ್ಚದ ರೂ.10.00 ಲಕ್ಷಗಳಿಗೆ ಮೀರಿದಂತೆ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ರವರು ಸಾಲ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಪಡೆದು ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಮಂಡಿಸಿ, ಅರ್ಹ ಅರ್ಜಿಗಳನ್ನು ಆಯ್ಕೆ ಮಾಡಿ ಸಂಬಂಧಪಟ್ಟ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಗೆ ಯೋಜನಾ ವೆಚ್ಚದ ಶೇ.90 ರಷ್ಟು ಸಾಲ ಮಂಜೂರಾತಿಗಾಗಿ ಶಿಫಾರಸ್ಸು ಮಾಡಬಹುದು. ಸಾಲ ಮಂಜೂರಾದ ನಂತರ ಸದರಿ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಮಂಡಿಸಿ, ನಿಯಮಾನುಸಾರ ಶೇ.60ರಷ್ಟು ಗರಿಷ್ಠ ರೂ.5.00 ಲಕ್ಷ ಸಹಾಯಧನವನ್ನು ಮಂಜೂರು ಮಾಡುವುದು. ಮಂಜೂರಾದ ಪ್ರಸ್ತಾವನೆಗಳನ್ನು ನಿಗದಿತ ನಮೂನೆಯಲ್ಲಿ ಸಹಾಯಧನ ಬಿಡುಗಡೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು. ಸಹಾಯಧನ ಬಿಡುಗಡೆಗೊಂಡ ಸದರಿ ಅಭ್ಯರ್ಥಿಗಳಿಗೆ / ಫಲಾನುಭವಿಗಳಿಗೆ 03 ದಿನಗಳ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮವನ್ನು ಸಿಡಾಕ್ / ರೂಡ್‌ಸೆಟಿ ವತಿಯಿಂದ ಹಮ್ಮಿಕೊಳ್ಳುವುದು.

ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಕ್ಕೆ ನಿಗಧಿಪಡಿಸಿರುವ ಅನುದಾನ :

ಅ) ಪ್ರತಿ ಜಿಲ್ಲೆಯಲ್ಲಿ ಒಂದು ಉದ್ಯಮಿಶೀಲತಾ ತರಬೇತಿಯಲ್ಲಿ ಕನಿಷ್ಠ 30 ಅಭ್ಯರ್ಥಿಗಳು ಇರತಕ್ಕದ್ದು. ತರಬೇತಿ ತಂಡದಲ್ಲಿ ಅಭ್ಯರ್ಥಿಗಳ ಕೊರತೆ ಇದ್ದಲ್ಲಿ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಸಾಲ ಮಂಜೂರಾತಿಯಾಗಿರುವ ಅಭ್ಯರ್ಥಿಗಳ ಪಟ್ಟಿ ಪಡೆದು ವಸತಿ ಸಹಿತ ತರಬೇತಿ ಕಾರ್ಯಕ್ರಮ ಏರ್ಪಡಿಸುವುದು.

ಆ) ಪ್ರತಿ 03 ದಿನಗಳ ವಸತಿ ಸಹಿತ ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಕ್ಕೆ ರೂ.75,000/-, ವಸತಿ ರಹಿತ ರೂ. 45,000/-ಗಳ ತರಬೇತಿ ವೆಚ್ಚವನ್ನು ನಿಗಧಿಪಡಿಸಿದೆ.

ಇ) ಉದ್ಯಮಶೀಲತಾ ತರಬೇತಿ ಕಾರ್ಯಕ್ರಮವು ರೂಡ್‌ಸೆಟಿ ಮುಖಾಂತರ ಹಮ್ಮಿಕೊಂಡಲ್ಲಿ ಆ ಜಿಲ್ಲೆಯ ಜಂಟಿ ನಿರ್ದೇಶಕರು Laisan Officer ಆಗಿ ಕಾರ್ಯ ನಿರ್ವಹಿಸಿ, ಬೇರೆ ಜಿಲ್ಲೆಗಳಿಂದ ಅಭ್ಯರ್ಥಿಗಳ ಪಟ್ಟಿ ಪಡೆದು ತರಬೇತಿ ಕಾರ್ಯಕ್ರಮ ಏರ್ಪಡಿಸಲು ಅನುದಾನ ಬಿಡುಗಡೆಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.

ಈ) ಸದರಿ ಉದ್ಯಮಿಶೀಲತಾ ತರಬೇತಿ ಕಾರ್ಯಕ್ರಮವನ್ನು ಸಿಡಾಕ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಲ್ಲಿ ನಿರ್ದೇಶಕರು, ಸಿಡಾಕ್ ಸಂಸ್ಥೆಯವರು ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಂದ ಅಭ್ಯರ್ಥಿಗಳ ಪಟ್ಟಿ ಪಡೆದು ತರಬೇತಿ ಅನುದಾನಕ್ಕಾಗಿ ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.

ಉ) ತರಬೇತಿ ಕಾರ್ಯಕ್ರಮ ಮುಗಿದ ನಂತರ ನಿಗದಿತ ನಮೂನೆಯಲ್ಲಿ ಹಣಬಳಕೆ ದೃಢೀಕರಣ ಪತ್ರ ಹಾಗೂ ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

ಊ) ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ತರಬೇತಿ ಸಂಸ್ಥೆಯವರು ನೀಡತಕ್ಕದ್ದು.

III) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಖಾಸಗಿ ಕೈಗಾರಿಕಾ ವಸಾಹತು ಸ್ಥಾಪನೆಗೆ ಶೇ.90 ರಷ್ಟು ಮೂಲಭೂತ ಸೌಕರ್ಯಕ್ಕಾಗಿ ಅನುದಾನ

ಸಂಘ / ಸಂಸ್ಥೆ / ಟ್ರಸ್ಟ್ ಇವರು ಕೈಗಾರಿಕಾ ವಸಾಹಾತುವಿಗಾಗಿ ಕನಿಷ್ಠ 10 ಎಕರೆ ಸೂಕ್ತ ಭೂಮಿಯನ್ನು ಗುರ್ತಿಸಿ, ನಿವೇಶನ / ಮಳಿಗೆಗಳನ್ನು ನಿರ್ಮಾಣ ಮಾಡಲು ನೀಲಿ ನಕ್ಷೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆಯನ್ನು ಪಡೆದು ಕೈಗಾರಿಕಾ ವಸಾಹಾತು ಅಭಿವೃದ್ಧಿ ಪಡಿಸಲು ವಿವರವಾದ ಅಂದಾಜು ವೆಚ್ಚದ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಎಸ್‌ಆರ್ ದರದಂತೆ Chartered Civil Engineer ರವರಿಂದ ತಯಾರಿಸಿ. ಮೂಲಭೂತ ಸೌಕರ್ಯಕ್ಕಾಗಿ ಅನುದಾನವನ್ನು ಇಲಾಖೆಯಿಂದ ಪಡೆಯಲು ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಂದ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವುದು. ಸದರಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಯಿಂದ ಅನುದಾನ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

ಆಯ್ಕೆ ಸಮಿತಿ :

ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಂಘ/ಸಂಸ್ಥೆ/ಟ್ರಸ್ಟ್ ಆಯ್ಕೆ ಮಾಡಲು ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

1.	ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	– ಅಧ್ಯಕ್ಷರು
2.	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ	– ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಎಸ್‌ಐಡಿಸಿ	– ಸದಸ್ಯರು
4.	ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ–ಪ್ರತಿನಿಧಿ	– ಸದಸ್ಯರು
5.	ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ	– ಸದಸ್ಯರು
6.	ಅಧಿಕ ನಿರ್ದೇಶಕರು (ಎಂಎಸ್‌ಎಂಇ), ಕೈವಾಇ	– ಸದಸ್ಯರು
7.	ವ್ಯವಸ್ಥಾಪಕ ನಿರ್ದೇಶಕರು, ಕೆಸಿಟಿಯು	– ಸದಸ್ಯರು
8.	ಮುಖ್ಯ ಸಲಹೆಗಾರರು ಹಾಗೂ ಮುಖ್ಯ ನಿರ್ವಹಣಾಧಿಕಾರಿಗಳು ಟೆಕ್ಸಾಕ್	– ಸದಸ್ಯರು
9.	ಅಧಿಕ ನಿರ್ದೇಶಕರು (ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	– ಸದಸ್ಯ ಕಾರ್ಯದರ್ಶಿ

ಅರ್ಹ ಸಹಾಯಧನ :

ಕೈಗಾರಿಕಾ ವಸಾಹಾತುವಿನಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಪಡಿಸಲು ತಗಲುವ ಅಂದಾಜು ವೆಚ್ಚದ ಮೇಲೆ ಶೇ.50ರಷ್ಟು ಗರಿಷ್ಟ ರೂ.500.00 ಲಕ್ಷಗಳನ್ನು ಇಲಾಖೆಯಿಂದ ಸಹಾಯಧನವಾಗಿ ಬಿಡುಗಡೆ ಮಾಡಬಹುದಾಗಿದೆ.

ಸಹಾಯಧನ ಬಿಡುಗಡೆಗೆ ವಿಧಾನ :

1) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು / ಸಂಸ್ಥೆಯವರು ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿಯನ್ನು ಪಡೆದು ಕೈಗಾರಿಕಾ ವಸಾಹಾತು ಸ್ಥಾಪಿಸಲು ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆದು ಸಹಾಯಧನ

ಬಿಡುಗಡೆಗೆ ಪ್ರಸ್ತಾವನೆಯನ್ನು ದಾಖಲಾತಿಗಳೊಂದಿಗೆ ಜಂಟಿ ನಿರ್ದೇಶಕರುಗಳಿಗೆ ಸಲ್ಲಿಸುವುದು. ಸದರಿ ಪ್ರಸ್ತಾವನೆಯನ್ನು ಜಂಟಿ ನಿರ್ದೇಶಕರು ಪರಿಶೀಲಿಸಿ, ಅರ್ಹ ಸಹಾಯಧನ ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.

2) ಸದರಿ ಪ್ರಸ್ತಾವನೆಯನ್ನು ಆಯ್ಕೆ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.

3) ಕೈಗಾರಿಕಾ ವಸಾಹಾತು ಸ್ಥಾಪಿಸುವ ಪ್ರವರ್ತಕರು ಕರ್ನಾಟಕ ಪಾರದರ್ಶಕತೆ ನಿಯಮಗಳು ಮತ್ತು ಅಧಿನಿಯಮಗಳ ಅನುಸಾರ ಇ-ಟೆಂಡರ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಕಡಿಮೆ ದರ ನಮೂದಿಸುವ ಅರ್ಜಿದಾರರಿಗೆ ಕಾರ್ಯಾದೇಶ ನೀಡುವುದು.

4) ಕೈಗಾರಿಕಾ ವಸಾಹಾತು ಸ್ಥಾಪಿಸುವ ಪ್ರವರ್ತಕರು ತಮ್ಮ ಪಾಲಿನ ಶೇ.50ರಷ್ಟು ಅಭಿವೃದ್ಧಿ ವೆಚ್ಚವನ್ನು ಭರಿಸಿದ ನಂತರ ಇಲಾಖೆ ವತಿಯಿಂದ ಅರ್ಹ ಮಂಜೂರಾದ ಸಹಾಯಧನವನ್ನು ಉಪಯುಕ್ತತೆಯನ್ನು ಪರಿಗಣಿಸಿ, ಮೂರು ಕಂತುಗಳಲ್ಲಿ ಕಾಮಗಾರಿಗಳ ಪ್ರಗತಿಗೆ ಅನುಸಾರವಾಗಿ ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು. ಕಾಮಗಾರಿ ಪ್ರಗತಿ ಆಗಿರುವುದಕ್ಕೆ Chartered Accountant ರವರಿಂದ ಸರ್ಟಿಫಿಕೇಟ್ ಪಡೆಯತಕ್ಕದ್ದು.

5) ಬಿಡುಗಡೆಗೊಳಿಸಿದ ಅನುದಾನದ ಉಪಯೋಗಕ್ಕೆ ಹಣ ಬಳಕೆ ದೃಢೀಕರಣ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

ನಿವೇಶನದ ಹಂಚಿಕೆ ವಿಧಾನ :

1) ಕೈಗಾರಿಕಾ ವಸಾಹಾತು ಅಭಿವೃದ್ಧಿಪಡಿಸಿದ ನಂತರ ನಿವೇಶನಗಳ ಹಂಚಿಕೆ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಪ್ರಚಾರ ಮಾಡಿ ಅರ್ಜಿಗಳನ್ನು ಆಹ್ವಾನಿಸಿ ಸಂಬಂದಪಟ್ಟ ಜಂಟಿ ನಿರ್ದೇಶಕರು ಇವರುಗಳ ಅಧ್ಯಕ್ಷತೆಯಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆ ಕೈಗೊಳ್ಳುವುದು.
2) ಕೈಗಾರಿಕಾ ವಸಾಹಾತುವಿನಲ್ಲಿ ನಿವೇಶನಗಳನ್ನು ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕೆಗಳಿಗೆ ಉಪಯೋಗವಾಗುವಂತಹ ರೀತಿಯಲ್ಲಿ ನಿರ್ಮಿಸುವುದು.
3) ನಿವೇಶನಗಳ ಹಂಚಿಕೆಯನ್ನು ಕಡ್ಡಾಯವಾಗಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಮಾತ್ರ ಪಾರದರ್ಶಕತೆಯನ್ನು ಅನುಸರಿಸಿ, ಹಂಚಿಕೆ ಮಾಡುವುದು.

IV) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಘ/ಸಂಸ್ಥೆ/ಟ್ರಸ್ಟ್ ಮಧ್ಯಮ ಮತ್ತು ಬೃಹತ್ ಉದ್ದಿಮೆ ಸ್ಥಾಪನೆಗಾಗಿ ಅನುದಾನ

ಸಂಘ/ಸಂಸ್ಥೆ/ಟ್ರಸ್ಟ್ ನಲ್ಲಿ ಕನಿಷ್ಟ ಶೇ.51ಕ್ಕಿಂತ ಹೆಚ್ಚಿನ ಸದಸ್ಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವರ್ಗಕ್ಕೆ ಸೇರಿದಲ್ಲಿ ಹಾಗೂ ಆ ಸಂಸ್ಥೆಯು ಕೇಂದ್ರ ಸರ್ಕಾರದ ಯೋಜನೆಯಡಿ ಮಧ್ಯಮ ಅಥವಾ ಬೃಹತ್ ಉದ್ದಿಮೆ ಸ್ಥಾಪನೆ ಮಾಡಲು ಮಂಜೂರಾತಿ ಪಡೆದಿದ್ದಲ್ಲಿ, ಸಂಘ/ಸಂಸ್ಥೆ/ಟ್ರಸ್ಟ್ ಇವರ ಪಾಲಿನ ಬಂಡವಾಳ ಹೂಡಿಕೆಯಲ್ಲಿ ಶೇ.50ರಷ್ಟು ಗರಿಷ್ಟ ರೂ.300.00 ಲಕ್ಷಗಳವರೆಗೂ ಸಹಾಯಧನ ನೀಡಬಹುದಾಗಿದೆ.

ಆಯ್ಕೆ ಸಮಿತಿ :

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಈ ಯೋಜನೆಯಡಿ ಅನುದಾನ ಮಂಜೂರಾತಿಗಾಗಿ ಯೋಜನಾ ಆಯ್ಕೆ ಮಾಡಲು ಈ ಕೆಳಕಂಡಂತೆ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

1.	ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	– ಅಧ್ಯಕ್ಷರು
2.	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ	– ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಎಸ್‌ಐಡಿಸಿ	– ಸದಸ್ಯರು
4.	ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ–ಪ್ರತಿನಿಧಿ	– ಸದಸ್ಯರು
5.	ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ	– ಸದಸ್ಯರು
6.	ಅಧಿಕ ನಿರ್ದೇಶಕರು (ಎಂಎಸ್‌ಎಂಇ), ಕೈವಾಇ	– ಸದಸ್ಯರು
7.	ವ್ಯವಸ್ಥಾಪಕ ನಿರ್ದೇಶಕರು, ಕೆಸಿಟಿಯು	– ಸದಸ್ಯರು
8.	ಮುಖ್ಯ ಸಲಹೆಗಾರರು ಹಾಗೂ ಮುಖ್ಯ ನಿರ್ವಹಣಾಧಿಕಾರಿಗಳು ಟೆಕ್ಸಾಕ್	– ಸದಸ್ಯರು
9.	ಅಧಿಕ ನಿರ್ದೇಶಕರು (ಜಿಕೈಕೇ), ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	– ಸದಸ್ಯ ಕಾರ್ಯದರ್ಶಿ

ಸಹಾಯಧನ ಬಿಡುಗಡೆಗೆ ವಿಧಾನ :

1) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು / ಸಂಸ್ಥೆಯವರು ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿಯನ್ನು ಪಡೆದು ಕೈಗಾರಿಕಾ ವಸಾಹಾತು ಸ್ಥಾಪಿಸಲು ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆದು ಸಹಾಯಧನ ಬಿಡುಗಡೆಗೆ ಪ್ರಸ್ತಾವನೆಯನ್ನು ದಾಖಲಾತಿಗಳೊಂದಿಗೆ ಜಂಟಿ ನಿರ್ದೇಶಕರುಗಳಿಗೆ ಸಲ್ಲಿಸುವುದು. ಸದರಿ ಪ್ರಸ್ತಾವನೆಯನ್ನು ಜಂಟಿ ನಿರ್ದೇಶಕರು ಪರಿಶೀಲಿಸಿ, ಅರ್ಹ ಸಹಾಯಧನ ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.
2) ಸದರಿ ಪ್ರಸ್ತಾವನೆಯನ್ನು ಆಯ್ಕೆ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಸಹಾಯಧನ ಮಂಜೂರಾತಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
3) ಸಂಘ/ಸಂಸ್ಥೆ/ಟ್ರಸ್ಟ್ ರವರು ಕೇಂದ್ರ ಸರ್ಕಾರದ ಯೋಜನೆಯಡಿ ಯೋಜನೆ ಮಂಜೂರಾತಿ ಪಡೆದ ನಂತರ ಪ್ರವರ್ತಕರ ಬಂಡವಾಳ ಹೂಡಿಕೆಯಲ್ಲಿ ಶೇ.50ರಷ್ಟು ಗರಿಷ್ಟ ರೂ.300.00 ಲಕ್ಷಗಳವರೆಗೂ ಸಹಾಯಧನ ಬಿಡುಗಡೆಗಾಗಿ ಈ ಕೆಳಕಂಡ ದಾಖಲಾತಿಗಳೊಂದಿಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರುಗಳಿಗೆ ಸಲ್ಲಿಸುವುದು.

a) ವಿವರವಾದ ಯೋಜನೆ ವರದಿ (DPR) :

b) ಸದಸ್ಯರುಗಳ ಪಟ್ಟಿ

c) ಸಂಘದ ಬೈಲಾ / MOA/AOA ಪ್ರತಿ

d) ಸದಸ್ಯರ ಜಾತಿ ಪ್ರಮಾಣ ಪತ್ರ

e) ಸಂಘ/ಸಂಸ್ಥೆ/ಟ್ರಸ್ಟ್ ಭೂಮಿ ಇರುವ ಬಗ್ಗೆ ದಾಖಲಾತಿಗಳ ಪ್ರತಿ

f) ಹಕ್ಕು ಪತ್ರ / ಖಾತೆ / EC ಪ್ರತಿ

g) ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಪಡೆದ ಪರವಾನಿಗೆ

h) ಸಕ್ಷಮ ಪ್ರಾಧಿಕಾರದಿಂದ ಕಟ್ಟಡದ ಅನುಮೋದಿತ ನೀಲಿ ನಕ್ಷೆ ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಪರವಾನಿಗೆ.

i) ವಿದ್ಯುತ್‌ಚ್ಛಕ್ತಿ / Feasibilty Report

4) ಕೇಂದ್ರ ಸರ್ಕಾರದಿಂದ ಮಂಜೂರಾದ ಅನುದಾನ ಉಪಯೋಗಿಸಿದ ನಂತರ ಪ್ರವರ್ತಕರ ಪಾಲಿನ ಬಂಡವಾಳ ಹೂಡಿಕೆಗೆ ಅನುಗುಣವಾಗಿ ವಿಶೇಷ ಘಟಕ ಯೋಜನೆಯಡಿ / ಗಿರಿಜನ ಉಪ ಯೋಜನೆಯಡಿ ಮಂಜೂರಾಗಿರುವ ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಬಹುದಾಗಿದೆ.

5) ಬಿಡುಗಡೆಗೊಳಿಸಿದ ಅನುದಾನದ ಉಪಯೋಗಕ್ಕೆ ಹಣ ಬಳಕೆ ದೃಢೀಕರಣ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸುವುದು.

(ಎಲ್.ಎಸ್. ಶ್ರೀಕಂಠಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ-3

Annexure to Govt., Order No. CI 145 CSC 2015, dated: 15.12.2015

Modified Guidelines for the Scheme for supporting Critical Industrial Infrastructure Development of existing and New Industrial Area/ Estates in the State

Introduction

1. The State Government vide Government Order No. CI 152 SPI 2013 Dated: 20.09.2013 has issued the guidelines for up-gradation of the infrastructure facilities in existing KIADB/ KSSIDC Industrial Area/Estate, where it is difficult to mobilize funds from the existing industrial units for improvements in industrial area/estate.

2. KIADB/KSSIDC are developing industrial area/estate in the State and to attract the investment to the State, it is necessary to provide land at reasonable cost with all necessary infrastructural facilities like approach road, internal roads, water supply, power infrastructure, drainage etc.

3. In order to provide good infrastructure facilities in existing and new industrial area/estate, the KIADB/KSSIDC have to be supported with Budgetary Provision.

4. In this context, the Budget announcement has been made during 2015-16 as below:

   "*It is proposed to upgrade the existing Industrial area / estates developed by KIADB / KSSIDC / Co-operative Societies and to develop the infrastructure facilities in New Industrial Area / Estates and a grant of Rs. 100 Crore is provided for this purpose during 2015-16*".

5. Funds will be provided for this scheme under Industrial Infrastructure for Institutions Investment Head of Account 4852-80-004-0-01(211)- Investment.

6. **Critical Industrial Infrastructure Development Scheme for existing KIADB / KSSIDC / Co-operative Societies Industrial Areas/Estates:**

a) KIADB/KSSIDC/SPV's/Co-operative Societies will be the implementing agencies for existing industrial area/estate.

b) The implementing agencies shall bring in minimum 25% matching share from their own resources. Existing industrialists in industrial area/estate are also te share the infrastructure up-gradation cost.

c) Financial support will be in the form of investment up to 75% of the project cost, on case to case basis from the Government.

d) KIADB/KSSIDC/SPV's/Co-operative Societies shall identify existing industrial areas/estates in the State, where critical infrastructure such as approach road, internal roads, water supply system, power infrastructure, e-connectivity etc., need to be provided on priority basis in consultation with the Joint Director, District Industries Centre.

e) KIADB/KSSIDC to prepare line estimates and place before the Committee constituted under the Chairmanship of Commissioner for Industrial Development with CEO, KIADB, MD, KSSIDC, CDO, KIADB, CE, KSSIDC, Additional Director (MSME) & Joint Director (ID) as members for in-principle approval.

f) Once the project gets in-principle approval, KIADB/KSSIDC to submit the detailed proposal to Commissioner for Industrial Development and Director of Industries & Commerce for final approval.

g) Commissioner for Industrial Development and Director of Industries & Commerce has to submit proposals for approval and release of funds to the Government.

h) Implementing Agency shall follow the procedures as per KTPP Act and implement the projects. Funds will be released in stages depending on the progress achieved.

7. Infrastructure Development Scheme for new KIADB / KSSIDC Industrial Areas/Estates

a) KIADB/KSSIDC shall identify new industrial areas/estates in the State, in consultation with Commissioner for Industrial Development and Director of Industries & Commerce, wherever the assistance is required from the Government.

b) The implementing agencies shall bear the infrastructure cost from their own resources. However, KIADB/KSSIDC shall take up the developmental/infrastructure works through the cost sharing model by charging the amount for development/ infrastructure to the allottees after adjusting the assistance received from the Government, based on the budgetary provisions.

c) KIADB/KSSIDC to prepare line estimates and place before the Committee constituted under the Chairmanship of Commissioner for Industrial Development with CEO, KIADB, MD, KSSIDC, CDO, KIADB, CE, KSSIDC, Additional Director (MSME) & Joint Director (ID) as members for in-principle approval. In-Principle approval may be given depending on the availability of funds from the Government.

d) Once the project gets in-principle approval, KIADB/KSSIDC to submit the detailed proposal to Commissioner for Industrial Development and Director of Industries & Commerce for final approval.

e) Commissioner for Industrial Development and Director of Industries & Commerce has to submit proposals for approval and release of funds to the Government.

f) Implementing Agency shall follow the procedures as per KTPP Act and implement the projects. Funds will be released in stages depending on the progress achieved.

15.12.2011

(L.S. SRIKANTABABU)
Under Secretary to Government, (SSI)
Commerce & Industries Department

ಅನುಬಂಧ - 4

(11)

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸರ್ಕಾರದ ತೆಂಗಿನ ನಾರಿನ ಉದ್ಯಮಕ್ಕೆ ನೆರವು – ತೆಂಗು ಭಾಗ್ಯ ಯೋಜನೆ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳನ್ನು ಮರುರೂಪಿಸುವ ಕುರಿತು.

ಓದಲಾಗಿದೆ: ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಪತ್ರ ಸಂಖ್ಯೆ: ಕೈವಾಇ/ವಿಶ್ವ/ಎ2/ತೆಂನಾನೆ/ಮಾಸೂ/2016-17/16, ದಿನಾಂಕ: 15.06.2016 ಮತ್ತು 06.07.2016.

*****

ಪ್ರಸ್ತಾವನೆ:

ಕರ್ನಾಟಕ ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳು ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ಧವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳಲ್ಲಿ ಸ್ಥಾಪಿಸಿರುವ ಯಂತ್ರೋಪಕರಣಗಳನ್ನು ಸತತವಾಗಿ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಯಂತ್ರಗಳು ಸವೆಯುವುದು ಮತ್ತು ಕೆಲವು ಬಿಡಿಭಾಗಗಳನ್ನು ಆಗಿಂದಾಗ್ಗೆ ಬದಲಾಯಿಸುವುದು ಅಗತ್ಯವಿರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಈ ಕೈಗಾರಿಕೆಗಳಲ್ಲಿ ಉಪಯೋಗಿಸುವ ಯಂತ್ರಗಳನ್ನು ತಾಂತ್ರಿಕವಾಗಿ ಅಭಿವೃದ್ಧಿಪಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಸೂಕ್ತ ರೀತಿಯಲ್ಲಿ ವಿನ್ಯಾಸಗೊಳಿಸಿದ ಯಂತ್ರಗಳನ್ನು ಮತ್ತು ಹೊಸ ತಂತ್ರಜ್ಞಾನವನ್ನು ಅಳವಡಿಸುವುದು, ಕಟ್ಟಡಗಳ ಆಧುನೀಕರಣಗೊಳಿಸುವುದು ಹಾಗೂ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಿ ಸ್ವಾವಲಂಬಿಗಳನ್ನಾಗಿ ಮಾಡುವುದು ಅವಶ್ಯಕತೆ ಇರುತ್ತದೆ. ಇದರಿಂದ ಗ್ರಾಮೀಣ ಪ್ರದೇಶದ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸುವುದಲ್ಲದೆ ಅವರ ದಿನನಿತ್ಯದ ಆದಾಯವನ್ನು ಸಹ ವೃದ್ಧಿಸಿಕೊಂಡು ನಿರಂತರವಾಗಿ ಉದ್ಯೋಗವನ್ನು ಕಲ್ಪಿಸಲಾಗುತ್ತಿರುತ್ತದೆ. ಈ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ತೆಂಗಿನ ನಾರಿನ ವಲಯಕ್ಕೆ ನೆರವು ಯೋಜನೆಯ ಲೆಕ್ಕಶೀರ್ಷಿಕೆ 2851-00-106-0-12 (059) ಇತರೆ ವೆಚ್ಚಗಳು ಅಡಿಯಲ್ಲಿ ಅನುದಾನವನ್ನು ನೀಡಲಾಗುತ್ತಿದ್ದು, ಮೇಲೆ ಓದಲಾದ ಪತ್ರದಲ್ಲಿ ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 112 ಸಿಎಸ್‌ಸಿ 2016 (ಭಾಗ-3), ಬೆಂಗಳೂರು, ದಿನಾಂಕ: 30.08.2016

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ವಯ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳು ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ಧವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳ ಕಟ್ಟಡ ಮತ್ತು ಯಂತ್ರೋಪಕರಣಗಳ ನವೀಕರಣ /-ದುರಸ್ಥಿಗಾಗಿ, ಹೊಸ ಯಂತ್ರಗಳ ಖರೀದಿ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ "ತೆಂಗಿನ ನಾರಿನ ಉದ್ಯಮಕ್ಕೆ ನೆರವು"- ತೆಂಗು ಭಾಗ್ಯ ಯೋಜನೆಯಡಿ ನೀಡಲಾಗುತ್ತಿರುವ ಅನುದಾನಕ್ಕೆ ಮತ್ತು ಅದರ ಸದ್ಬಳಕೆಗೆ ಈ ಆದೇಶದಲ್ಲಿ ಮರು ರೂಪಿಸಿದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಲಾಗಿದೆ.

ಈ ಯೋಜನೆಯ ಅನುಷ್ಠಾನವನ್ನು ಈ ಆದೇಶದಲ್ಲಿ ಅನುಮೋದಿಸಲಾಗಿರುವ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸತಕ್ಕದ್ದು.

ಯೋಜನೆಯ ಹೆಸರು : ತೆಂಗಿನ ನಾರಿನ ಉದ್ಯಮಕ್ಕೆ ನೆರವು – ತೆಂಗು ಭಾಗ್ಯ

ಲೆಕ್ಕಶೀರ್ಷಿಕೆ : 2851-00-106-0-12 (059) ಇತರೆ ವೆಚ್ಚಗಳು

ಹಿನ್ನೆಲೆ:

ಕರ್ನಾಟಕ ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ರಾಜ್ಯಾದ್ಯಂತ ತೆಂಗಿನ ನಾರು ಮತ್ತು ನಾರಿನ ಸಿದ್ಧವಸ್ತುಗಳನ್ನು ತಯಾರಿಸುವ ಘಟಕಗಳನ್ನು ಹೊಂದಿದ್ದು, ಈ ಘಟಕಗಳ ಕಟ್ಟಡ ಮತ್ತು ಯಂತ್ರೋಪಕರಣಗಳ ನವೀಕರಣ ಮತ್ತು ದುರಸ್ಥಿಗಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

ಯೋಜನೆಯ ಮಾರ್ಗಸೂಚಿಗಳು:

ಅ) **ಅನುಷ್ಠಾನ ಸಂಸ್ಥೆಗಳು:**

- ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ
- ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ

ಆ) **ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ:**

- ನಿಗಮದ ಉತ್ಪಾದನಾ ಘಟಕಗಳಲ್ಲಿ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆಯಲ್ಲಿ ಗ್ರಾಮೀಣ ನಿರುದ್ಯೋಗಿಗಳಿಗೆ ಅದರಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ ಆಯ್ಕೆ ಮಾಡಿ, ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಗಲುವ ವೆಚ್ಚದ ಹಾಗೂ ವಿವರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

ಅ) ಶಿಷ್ಯವೇತನ		ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1,500/- ರಂತೆ
ಆ) ಬೋಧಕರ ಗೌರವಧನ		ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 300/- ರಂತೆ (ಒಟ್ಟು ಬೋಧಕರಿಗೆ ಗೌರವಧನ ಮಾಹೆಯಾನ 10 ಅಭ್ಯರ್ಥಿಗಳ ತಂಡಕ್ಕೆ ಗರಿಷ್ಠ ರೂ. 3,000/- ಗಳಿಗೆ ಮಿತಿಗೊಳಿಸಿದೆ).
ಇ) ತರಬೇತಿಗಾಗಿ ಕಚ್ಚಾ ಸಾಮಾಗ್ರಿ		ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 500/- ರಂತೆ
ಈ) ಸುಧಾರಿತ ಉಪಕರಣಗಳು		ತರಬೇತಿ ಪೂರೈಸಿದ ಪ್ರತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ರೂ. 5,000/- ಗಳವರೆಗೆ ಸಂಬಂಧಪಟ್ಟ ಚಟುವಟಿಕೆಯಲ್ಲಿ ಉಚಿತ ಸುಧಾರಿತ ಉಪಕರಣಗಳನ್ನು ನೀಡಲಾಗುವುದು.
ಉ) ತರಬೇತಿ ಅವಧಿ		04 ತಿಂಗಳು
ಊ) ತರಬೇತಿ ವೆಚ್ಚ	ಸಾಮಾನ್ಯ ವರ್ಗ	ಅ) 04 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 9,200/- + ನಿರ್ವಹಣೆ ವೆಚ್ಚ ಶೇ. 10 ರಷ್ಟು ರೂ. 920/- ಹೀಗೆ ಒಟ್ಟು ರೂ. 10,120/-
	ಪ.ಜಾ/ ಪ.ಪಂ.	ಆ) 04 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 9,200/- + ನಿರ್ವಹಣೆ ವೆಚ್ಚ ಶೇ. 10 ರಷ್ಟು ರೂ. 920/- + ಉಪಕರಣಗಳ ಮೊತ್ತ ರೂ. 5,000/- ಹೀಗೆ ಒಟ್ಟು ರೂ. 15,120/- (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಉಪಕರಣ ಒಳಗೊಂಡಂತೆ)

- ನಿಗಮದ ಉತ್ಪಾದನಾ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತೆಂಗಿನ ನಾರಿನ ಕೆಲಸಗಾರರಿಗೆ ಹೆಚ್ಚು ಗುಣಮಟ್ಟದ ಉತ್ಪನ್ನಗಳ ತಯಾರಿಕೆಗೆ ಅನುವಾಗುವಂತೆ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ತಗಲುವ ವೆಚ್ಚ ಮತ್ತು ವಿವರಗಳನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

ಅ) ಶಿಷ್ಯವೇತನ	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1,500/- (ಖಾಯಂ ಸಿಬ್ಬಂದಿಗಳು ಶಿಷ್ಯವೇತನಕ್ಕೆ ಅರ್ಹರಾಗಿರುವುದಿಲ್ಲ).
ಆ) ಬೋಧಕರ ಗೌರವಧನ	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 300/- ರಂತೆ (ಒಟ್ಟು ಬೋಧಕರಿಗೆ ಗೌರವಧನ ಮಾಹೆಯಾನ 10 ಅಭ್ಯರ್ಥಿಗಳ ತಂಡಕ್ಕೆ ಗರಿಷ್ಠ ರೂ. 3,000/- ಗಳಿಗೆ ಮಿತಿಗೊಳಿಸಿದೆ).
ಇ) ತರಬೇತಿಗಾಗಿ ಕಚ್ಚಾ ಸಾಮಾಗ್ರಿ	ಪ್ರತಿ ಅಭ್ಯರ್ಥಿಗೆ ಮಾಹೆಯಾನ ರೂ. 1500/- ರಂತೆ
ಈ) ತರಬೇತಿ ಅವಧಿ	02 ತಿಂಗಳು
ಉ) ತರಬೇತಿ ವೆಚ್ಚ	ನಿರ್ವಹಣಾ ವೆಚ್ಚ ಶೇ. 10 ರಂತೆ ರೂ. 660ಗಳು ಸೇರಿ 02 ತಿಂಗಳ ತರಬೇತಿಗೆ ಪ್ರತಿ ಅಭ್ಯರ್ಥಿಗೆ ಒಟ್ಟು ತರಬೇತಿ ವೆಚ್ಚ ರೂ. 7,260/- (ಎಲ್ಲಾ ವರ್ಗದವರಿಗೆ)

ಮೇಲೆ ತಿಳಿಸಿದ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಹಾಗೂ ಅದರಡಿ ರೂಪಿಸಿರುವ ನಿಯಮಗಳು ಅನ್ವಯಿದಲ್ಲಿ ಅದನ್ನು ತಪ್ಪದೇ ಪಾಲಿಸಿ ಅನುಷ್ಠಾನಗೊಳಿಸತಕ್ಕದ್ದು.

ಇ) ನಿಗಮದ ಉತ್ಪಾದನಾ ಘಟಕಗಳಲ್ಲಿನ ಯಂತ್ರೋಪಕರಣಗಳ ದುರಸ್ಥಿ ಮತ್ತು ನಿರ್ವಹಣೆ ಸಹಾಯ:

ನಿಗಮದ ಬಹುತೇಕ ಉತ್ಪಾದನಾ ಘಟಕಗಳಲ್ಲಿ ಅಳವಡಿಸಲಾಗಿರುವ ಯಂತ್ರಗಳು ಹಳೆಯದಾಗಿದ್ದು, ನಿರಂತರ ಉತ್ಪಾದನೆಯಲ್ಲಿ ತೊಡಗಿರುವುದರಿಂದ, ಆಗ್ಗಿಂದಾಗ್ಗೆ ದುರಸ್ಥಿಗೆ ಒಳಪಡಬಹುದು. ಈ ರೀತಿ ದುರಸ್ಥಿಗೆ ಒಳಪಡುವ ಯಂತ್ರಗಳ ದುರಸ್ಥಿ ವೆಚ್ಚವನ್ನು ನಿಗಮದ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟವಾಗುವ ಸಂದರ್ಭದಲ್ಲಿ ದುರಸ್ಥಿಯನ್ನು ಸಕಾಲದಲ್ಲಿ ಕೈಗೊಳ್ಳದೇ ಇದ್ದ ಪಕ್ಷದಲ್ಲಿ ಉತ್ಪಾದನೆ ಕುಂಠಿತಗೊಳ್ಳುವುದಲ್ಲದೇ, ಕೆಲಸಗಾರರಿಗೆ ಕೆಲಸವಿಲ್ಲದಂತಾಗಿ, ನಿಗಮದ ಉತ್ಪಾದನಾ ಘಟಕಗಳನ್ನು ತ್ಯೊರೆದು ಬೇರೆ ಕೈಗಾರಿಕೆಗಳಿಗೆ ವಲಸೆ ಹೋಗಬಹುದು. ಇದರಿಂದ, ನಿಗಮ ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ಈ ನಿಟ್ಟಿನಲ್ಲಿ ದುರಸ್ಥಿಗೆ ಒಳಪಡುವ ಯಂತ್ರಗಳನ್ನು ಸಕಾಲದಲ್ಲಿ ದುರಸ್ಥಿಗೊಳಿಸಿ, ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲು ಇದಲ್ಲದೇ, ಯಂತ್ರೋಪಕರಣಗಳಿಗೆ ಅಳವಡಿಸಿರುವ ವೈರುಗಳು ಹಳೆಯದಾಗಿರುವುದರಿಂದ, ಕೆಲವು ಸಂದರ್ಭಗಳಲ್ಲಿ ಶಾರ್ಟ್‌ಸರ್ಕ್ಯೂಟ್ ಆಗುವ ಸಂಭವವಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ರೀ–ವೈಯರಿಂಗ್ ಮಾಡಿಸುವುದು ಅವಶ್ಯಕವಾಗಿದೆ. ಈ ಕೆಲಸ ಕಾರ್ಯಗಳಿಗೆ ಸರ್ಕಾರದ ಆರ್ಥಿಕ ನೆರವು ಅಗತ್ಯವಿದ್ದಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುವುದು.

- ಉತ್ಪಾದನಾ ಘಟಕಗಳಲ್ಲಿ ದುರಸ್ಥಿಗೆ ಒಳಪಡುವ ಯಂತ್ರಗಳು ಯಾವ ಸಾಲಿನಲ್ಲಿ ಖರೀದಿಸಲಾಗಿದೆ ಎಂಬುದರ ಬಗ್ಗೆ ವಿವರ ನೀಡುವುದು.
- ಈ ಯಂತ್ರಗಳ ಗ್ಯಾರಂಟಿ / ವಾರೆಂಟಿ ಅವಧಿ ತಿಳಿಸುವುದು.
- ಸದರಿ ಯಂತ್ರೋಪಕರಣಗಳು ಹಿಂದೆ ದುರಸ್ತಿಗೊಳಿಸಿದ ವಿವರ
- ದುರಸ್ಥಿಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಪ್ರಕಾರ ನಿಯಮಾನುಸಾರ ದುರಸ್ಥಿಗೆ ಕ್ರಮ ವಹಿಸುವುದು.
- ಯಂತ್ರಗಳು ದುರಸ್ಥಿಗೊಂಡ ನಂತರ ಉತ್ಪಾದನೆಯಲ್ಲಿ ಸಮರ್ಪಕವಾಗಿ ತೊಡಗಿದೆಯೇ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ತದನಂತರ, ಬಿಲ್ಲಿನ ಮೊತ್ತ ಬಿಡುಗಡೆ ಮಾಡುವುದು.

ಈ) ನಿಗಮದ ಉತ್ಪಾದನಾ ಘಟಕಗಳಿಗೆ ಹೆಚ್ಚಿನ ತಂತ್ರಜ್ಞಾನ ಹೊಂದಿದ ಹೊಸ ಯಂತ್ರೋಪಕರಣಗಳ ಅಳವಡಿಕೆ.

ನಿಗಮದ ಉತ್ಪಾದನಾ ಘಟಕಗಳಲ್ಲಿ ಹೆಚ್ಚು ಉತ್ಪಾದನೆಗೆ ಕ್ರಮ ವಹಿಸುವ ನಿಟ್ಟಿನಲ್ಲಿ ಹಾಲಿಯಿರುವ ಯಂತ್ರಗಳ ಜೊತೆಗೆ ಹಾಗೂ ಅನುಪಯುಕ್ತ ಯಂತ್ರಗಳನ್ನು ವಿಲೇವಾರಿ ಮಾಡಿ, ಹೊಸ ತಂತ್ರಜ್ಞಾನವುಳ್ಳ ಹೆಚ್ಚುವರಿ ಯಂತ್ರಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ. ಇವುಗಳ ವೆಚ್ಚಕ್ಕೆ ನಿಗಮ / ಮಂಡಳಿಗಳು ಆರ್ಥಿಕವಾಗಿ ಸದೃಢತೆ ಹೊಂದದೆ ಇದಲ್ಲಿ, ಸರ್ಕಾರದಿಂದ ಆರ್ಥಿಕ ನೆರವು ನೀಡಬಹುದಾಗಿದೆ. ಯಂತ್ರೋಪಕರಣಗಳ ಖರೀದಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು.

- ಯಂತ್ರೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವುದು.

- ಜಂಟಿ ನಿರ್ದೇಶಕರು, ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರ
- ವ್ಯವಸ್ಥಾಪಕ ನಿರ್ದೇಶಕರು, ತೆಂಗಿನ ನಾರಿನ ನಿಗಮ / ತೆಂಗಿನ ನಾರಿನ ಮಹಾಮಂಡಳಿ ಅಥವಾ ಅವರ ಪ್ರತಿನಿಧಿ
- ಉಪ ವ್ಯವಸ್ಥಾಪಕರು (ಖಾಗ್ರಾ), ಜಿಲ್ಲಾ ಪಂಚಾಯತ್.
- ನಿಗಮ / ಮಹಾಮಂಡಳಿಯ ಸಂಬಂಧಪಟ್ಟ ಅಧಿಕಾರಿ.

➢ ಮೇಲಿನ ಸಮಿತಿಯಲ್ಲಿ ಯಂತ್ರೋಪಕರಣಗಳ ಪಟ್ಟಿಗೆ ಅನುಮೋದನೆ ಪಡೆದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಹೊಸ ಯಂತ್ರಗಳ ಖರೀದಿ ಬಗ್ಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಅನುಮೋದನೆ ಪಡೆಯತಕ್ಕದ್ದು.

➢ ಯಂತ್ರೋಪಕರಣಗಳ ಖರೀದಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಅದರಡಿ ರೂಪಿಸಿರುವ ನಿಯಮಗಳಂತೆ ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಮೇಲಿನ ಸಮಿತಿಯಲ್ಲಿ ಅಂತಿಮಗೊಳಿಸುವುದು.

➢ ಟೆಂಡರ್‌ನ ಷರತ್ತು ಮತ್ತು ನಿಬಂಧನೆಯಂತೆ ಯಂತ್ರೋಪಕರಣಗಳ ಸರಬರಾಜು ದಾರರಿಗೆ ಹಣ ಬಿಡುಗಡೆ ಮಾಡತಕ್ಕದ್ದು.

ಉ) ನಿಗಮದ ಉತ್ಪಾದನಾ ಘಟಕಗಳ ಕಟ್ಟಡ ದುರಸ್ಥಿ ಮತ್ತು ನಿರ್ವಹಣೆಗೆ ಸಹಾಯ:

ನಿಗಮ/ ಮಹಾಮಂಡಳಿಯ ಉತ್ಪಾದನಾ ಘಟಕಗಳ ಕಟ್ಟಡಗಳು ಹಳೆಯದಾಗಿದಲ್ಲಿ ಇವುಗಳ ಸಿವಿಲ್ ಮತ್ತು ವಿದ್ಯುತ್ ನಿರ್ವಹಣೆ ಕಾರ್ಯವನ್ನು ಕೈಗೊಳ್ಳಬೇಕಾಗಿದ್ದಲ್ಲಿ, ಇವುಗಳಿಗೆ ತಗಲುವ ವೆಚ್ಚವನ್ನು ನಿಗಮದ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಸಾಮರ್ಥ್ಯವಿಲ್ಲದಿದರೆ. ಸರ್ಕಾರದ ಆರ್ಥಿಕ ನೆರವಿಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವುದು.

➢ ಉತ್ಪಾದನಾ ಘಟಕಗಳ ಕಟ್ಟಡಗಳ ದುರಸ್ಥಿಗೆ ಸಂಬಂಧಪಟ್ಟಂತೆ, ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ದರಗಳಂತೆ ಸರ್ಕಾರದ ಯಾವುದಾದರು ಇಲಾಖೆ / ಸಂಸ್ಥೆಗಳ ಇಂಜಿನಿಯರ್‌ಗಳಿಂದ ಸಿದ್ದಪಡಿಸತಕ್ಕದ್ದು ಅಥವಾ ಪರಿಶೀಲನೆಗೆ ಒಳಪಡಿಸುವುದು.

➢ ದುರಸ್ಥಿಯನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999ರ ಮತ್ತು ಆದರ ನಿಯಮದನ್ವಯ ದುರಸ್ಥಿಗೆ ಕ್ರಮ ವಹಿಸುವುದು.

➢ ಕಟ್ಟಡಗಳ ದುರಸ್ಥಿಯನ್ನು ಅಂದಾಜು ಪಟ್ಟಿಯಂತೆ ಕೈಗೊಳ್ಳಲಾಗಿದೆಯೇ ಹಾಗೂ ತೃಪ್ತಿಕರವಾಗಿದೆಯೇ ಎಂಬುದರ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ಹಾಗೂ ಈ ಸಂಬಂಧ ನೋಂದಾಯಿತ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರ ಇಲಾಖೆಗಳ ಇಂಜಿನಿಯರ್ ರವರಿಂದ ದೃಢೀಕರಣ ಪಡೆದು, ನಂತರ ಬಿಲ್ಲಿನ ಮೊತ್ತ ಬಿಡುಗಡೆ ಮಾಡಲು ಕ್ರಮ ವಹಿಸುವುದು.

ಊ) ಹೊಸ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಯೋಜನಾ ವರದಿಗನುಗುಣವಾಗಿ ಆರ್ಥಿಕ ಸಹಾಯ:

ಹೊಸ ಉತ್ಪಾದನಾ ಘಟಕಗಳ ಸ್ಥಾಪನೆಗೆ ಅವಶ್ಯಕವಿರುವ ಕಟ್ಟಡಗಳ ನಿರ್ಮಾಣ, ವಿದ್ಯುದ್ಧೀಕರಣ, ಕೊಳವೆ ಬಾವಿ ತಂತಿ ಬೇಲಿ ಹಾಗೂ ಇತರೆ ಮೂಲಭೂತ ಸೌಕರ್ಯ ಒದಗಿಸಲು ವಿವರವಾದ ವರದಿಯೊಂದಿಗೆ ಸೂಕ್ತ ಪ್ರಸ್ತಾವನೆಯನ್ನು ಆಯುಕ್ತರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿ, ಮಂಜೂರಾತಿ ಪಡೆದು ಮುಂದಿನ ಕ್ರಮ

ವಹಿಸುವುದು. ಹೊಸ ಉತ್ಪಾದನಾ ಘಟಕಗಳನ್ನು ಸ್ಥಾಪನೆ / ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸತಕ್ಕದ್ದು.

1. ಹೊಸ ಉತ್ಪಾದನಾ ಘಟಕದ ಕಾರ್ಯಸಾಧ್ಯತಾ ವರದಿಯನ್ನು (Feasibility Report) ಸಿದ್ದಪಡಿಸಿ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಸದರಿ ಉತ್ಪಾದನಾ ಘಟಕವು ಆರ್ಥಿಕವಾಗಿ ಕಾರ್ಯಸಾಧುವಾಗಿದಲ್ಲಿ (Financially Viable) ಮಂಡಳಿಯ ಅನುಮೋದನೆಯನ್ನು ಪಡೆಯತಕ್ಕದ್ದು.

2. ನಂತರ ಈ ಉತ್ಪಾದನಾ ಘಟಕದ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ ಈ ವರದಿಯಲ್ಲಿ ಉತ್ಪಾದನಾ ಘಟಕದ Financial Projections, Sustainability ಬಗ್ಗೆ ಸ್ಪಷ್ಟವಾಗಿ ವಿವರಿಸತಕ್ಕದ್ದು.

3. ಯೋಜನಾ ವರದಿಯನ್ನು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಇವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

4. ಅವಶ್ಯಕತೆ ಆಧಾರದ ಮೇಲೆ ಯೋಜನೆಗಳನ್ನು ಅನುಮೋದಿಸಲು ಸರ್ಕಾರದ ಮಟ್ಟದಲ್ಲಿ ಸಮಿತಿಯನ್ನು ರಚಿಸಿಕೊಳ್ಳಬಹುದಾಗಿದೆ.

5. ಸರ್ಕಾರದಿಂದ ಅನುಮೋದನೆ ಪಡೆದ ನಂತರ ಈ ಕೆಳಕಂಡ ಕಾರ್ಯ ವಿಧಾನದಂತೆ ಉತ್ಪಾದನಾ ಘಟಕದ ಕಾಮಗಾರಿಗಳನ್ನು ಪೂರೈಸತಕ್ಕದ್ದು.

- ಉದ್ದೇಶಿತ ಘಟಕದ ಕಟ್ಟಡ ನಿರ್ಮಾಣಕ್ಕೆ ನಿಗಮ / ಮಂಡಳಿಯು ಸ್ವಂತ ನಿವೇಶನವನ್ನು ಕಡ್ಡಾಯವಾಗಿ ಹೊಂದಿರಬೇಕು.
- ಕಟ್ಟಡಗಳ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ದರಗಳಂತೆ ಅಂದಾಜು ಪಟ್ಟಿ ಹಾಗೂ ನಕ್ಷೆಯನ್ನು ನೋಂದಾಯಿತ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರೆ ಇಲಾಖೆಗಳ ಇಂಜಿನಿಯರ್‌ಗಳಿಂದ ಸಿದ್ದಪಡಿಸಿ ಅಥವಾ ಅವರ ಪರಿಶೀಲನೆಗೆ ಒಳಪಡಿಸಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಖೆಯ ಶಿಫಾರಸ್ಸಿನೊಂದಿಗ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.
- ಕಟ್ಟಡ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 1999 ಮತ್ತು ಅದರ ನಿಯಮಗಳನ್ವಯ ಕ್ರಮ ಕೈಗೊಳ್ಳುವುದು.
- ಟೆಂಡರ್‌ನಲ್ಲಿ ಯಶಸ್ವಿಯಾದ ಗುತ್ತಿಗೆದಾರರು ಉದ್ದೇಶಿಸಿರುವ ಕಟ್ಟಡ ನಿರ್ಮಾಣ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಅನುಮೋದಿಸಲಾದ ಅಂದಾಜುಪಟ್ಟಿ ಹಾಗೂ ನಕ್ಷೆಯಂತೆ ಗುಣಮಟ್ಟದ ಕಾಮಗಾರಿಯನ್ನು ಕೈಗೊಂಡಿರುವ ಬಗ್ಗೆ ಚಾರ್ಟರ್ಡ್ ಇಂಜಿನಿಯರ್ / ಸರ್ಕಾರದ ಇತರೆ ಇಲಾಖೆಗಳ ಇಂಜಿನಿಯರ್ ರವರಿಂದ ಹಾಗೂ ನಿಗಮದ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಯವರಿಂದ ದೃಢೀಕರಿಸಿ, ಬಿಲ್ಲನ್ನು ಹಣ ಪಾವತಿಗಾಗಿ ಸಲ್ಲಿಸುವುದು.

- ಹಣ ಪಾವತಿಯನ್ನು ಹಂತ ಹಂತವಾಗಿ ಪರಿಶೀಲಿಸಿ ಬಿಡುಗಡೆ ಮಾಡಬಹುದು.
- ತೆಂಗಿನ ನಾರಿನ ನಿಗಮ / ಮಹಾಮಂಡಳಿಗಳು ಆ ಸಾಲಿನಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸಲ್ಲಿಸತಕ್ಕದ್ದು.
- ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕ್ರಿಯಾ ಯೋಜನೆಯ ಅನುಮೋದನೆಗೆ ಸಮಿತಿಯನ್ನು ರಚಿಸಿಕೊಳ್ಳತಕ್ಕದ್ದು.
- ಅನುಮೋದಿತ ಕ್ರಿಯಾ ಯೋಜನೆಯಂತೆ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಊ) ಎಂಎಸ್‌ಎಂಇ ಮಂತ್ರಾಲಯ, ನವದೆಹಲಿ ರವರ ಕೇಂದ್ರ ಪುರಸ್ಕೃತ ಸ್ಫೂರ್ತಿ ಯೋಜನೆ

(Scheme of Fund for Regeneration of Traditional Industries (SFURTI)

ಹಿನ್ನೆಲೆ:-

ಭಾರತ ಸರ್ಕಾರದ ಕ್ಲಸ್ಟರ್ ಅಭಿವೃದ್ಧಿ ಯೋಜನೆಯು ಒಂದೇ ಸ್ಥಳದಲ್ಲಿ ಒಂದೇ ತರಹದ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳನ್ನು ಗುರ್ತಿಸಿ, ಚಟುವಟಿಕೆಗೆ ಅವಶ್ಯವಿರುವ ಸಾಮೂಹಿಕ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ ಅಗತ್ಯವಿರುವ ಸೇವಾ ಸೌಲಭ್ಯಗಳನ್ನು ಪಡೆದು ನಿರಂತರ ಉದ್ಯೋಗ ಕಲ್ಪಿಸುವುದು, ಮಾರುಕಟ್ಟೆ ಪ್ರೋತ್ಸಾಹ, ಉತ್ಪನ್ನಗಳ ಮೌಲ್ಯ ಹೆಚ್ಚಿಸುವ ಹಾಗೂ ಸದರಿ ಕ್ಲಸ್ಟರ್‌ನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾಯರ್ ಕುಶಲ ಕರ್ಮಿಗಳಿಗೆ ಕೌಶಲ್ಯ ಉನ್ನತೀಕರಣ ಇತರೆ ಕಾರ್ಯಕ್ರಮಗಳು ಸ್ಫೂರ್ತಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ತೆಂಗಿನ ನಾರಿನ ಉದ್ಯಮದ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರದ ಸೌಮ್ಯದ ಸಂಸ್ಥೆಗಳಾದ ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ ನಿ., ಹಾಗೂ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮಗಳ ಪ್ರಸ್ತಾವನೆಗಳು ಭಾರತ ಸರ್ಕಾರದ ಈ ಯೋಜನೆ ಅಡಿಯಲ್ಲಿ ಅನುಮೋದನೆಗೊಂಡಲ್ಲಿ ಈ ಅನುಷ್ಠಾನ ಸಂಸ್ಥೆಗಳು ತಮ್ಮ ವಂತಿಕೆಯನ್ನು ಹೂಡುವಲ್ಲಿ ಆರ್ಥಿಕವಾಗಿ ಸಾಮರ್ಥ್ಯ ಹೊಂದದೆ ಇದ್ದ ಪಕ್ಷದಲ್ಲಿ ಅನುಷ್ಠಾನ ಸಂಸ್ಥೆಗಳ ವಂತಿಕೆ ಶೇಕಡ 25ರಷ್ಟನ್ನು ರಾಜ್ಯ ಸರ್ಕಾರದಿಂದ ಭರಿಸಬಹುದಾಗಿದೆ.

ಯೋಜನೆ ಅನುಷ್ಠಾನ:-

- ಸ್ಫೂರ್ತಿ ಯೋಜನೆ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರದಿಂದ ಅಂತಿಮ ಅನುಮೋದನೆ ಪಡೆದ ಯೋಜನೆಗಳಿಗೆ ಅನುಷ್ಠಾನ ಸಂಸ್ಥೆಗಳು ಹೂಡಿಕೆ ಮಾಡಬಹುದಾದ ವಂತಿಕೆಯನ್ನು ಭರಿಸಲು ಅಶಕ್ತವಾದಲ್ಲಿ ರಾಜ್ಯ ಸರ್ಕಾರದಿಂದ ಈ ಯೋಜನೆಯಡಿ ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಆಯುಕ್ತರು, ಕೈಗಾರಿಕಾಭಿವೃದ್ಧಿ ಇವರ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.

ಈ ಯೋಜನೆಯ ಮಾರ್ಗಸೂಚಿ ಕುರಿತಂತೆ ಹಿಂದೆ ಸರ್ಕಾರದಿಂದ ಹೊರಡಿಸಲಾಗಿರುವ ಎಲ್ಲಾ ಆದೇಶಗಳನ್ನು ರದ್ದುಪಡಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 310 ವೆಚ್ಚ-1/2016, ದಿನಾಂಕ: 27.08.2016 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 29 ಎಫ್‌ಆರ್‌ಓ 2016, ದಿನಾಂಕ: 10.08.2016 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
30.08.2016
[ಎಲ್.ಎಸ್. ಶ್ರೀಕಂಠಬಾಬು]
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ ಕಳುಹಿಸಲಾಗಿದೆ. ತದನಂತರ, ಪ್ರಕಟಗೊಂಡ ಸಂಚಿಕೆಗಳ 25 ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿದೆ.

ಪ್ರತಿಯನ್ನು:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3) ಪ್ರಧಾನ ಮಹಾಲೇಖಪಾಲರು (ಎ &ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4) ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1.
5) ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ವಿ.ಐ.ಟಿ.ಸಿ. ಕಟ್ಟಡ, ಕಸ್ತೂರ್ ಬಾ ರಸ್ತೆ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಲ (ನಿ), ನಂ. 953(ಎ), 2ನೇ ಮುಖ್ಯರಸ್ತೆ, 4ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು ಮತ್ತು ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ-4

ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂಡಿಎ) ನೀಡುವ ಕುರಿತು ಮಾರ್ಗಸೂಚಿಗಳು:-

ಲೆಕ್ಕ ಶೀರ್ಷಿಕೆ: 2851-00-106-0-11(059) ಇತರೆ ವೆಚ್ಚಗಳು.

ಯೋಜನೆ:

ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಉತ್ಪಾದಿಸಿದ ಉತ್ಪನ್ನಗಳ ಮಾರಾಟ ವಹಿವಾಟಿನ ಸರಾಸರಿಯಲ್ಲಿ ಶೇ.10 ರಷ್ಟು ಗರಿಷ್ಠ ರೂ.25.00 ಲಕ್ಷಗಳ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಿಗೆ ನೀಡುವುದು.

ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಬಳಕೆ ಮಾಡಬಹುದಾದ ಚಟುವಟಿಕೆಗಳು:-

- ತೆಂಗಿನ ನಾರು ಉತ್ಪನ್ನಗಳ ಪ್ರಚಾರ.
- ನೂತನ ಮಾರಾಟ ಮಳಿಗೆ ಸ್ಥಾಪನೆ.
- ಅಸ್ಥಿತ್ವದಲ್ಲಿರುವ ಮಾರಾಟ ಮಳಿಗೆಗಳ ನವೀಕರಣ.
- ಮಾರುಕಟ್ಟೆ ಅಧ್ಯಯನ.
- ತೆಂಗಿನ ನಾರಿನ ಉತ್ಪನ್ನಗಳ ವಿನ್ಯಾಸ ಉನ್ನತೀಕರಣ.
- ದಾಸ್ತಾನು ಮಳಿಗೆಗಳ ನಿರ್ಮಾಣ ಮತ್ತು ನಿರ್ವಹಣೆ .
- ನವೀನ ಮಾರಾಟ ತಂತ್ರಗಾರಿಕೆ.

ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಕ್ಲೈಮ್ ವಿಧಾನ

ಅ. ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳ ಮಾರುಕಟ್ಟೆ ಅಭಿವೃದ್ಧಿ ಸಹಾಯಧನಕ್ಕಾಗಿ ಅನುಬಂಧ-1 ರಲ್ಲಿನ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಸೂಕ್ತ ದಾಖಲಾತಿಗಳೊಂದಿಗೆ ಮತ್ತು ತಮ್ಮ ದೃಢೀಕರಣದೊಂದಿಗೆ ಸಂಬಂಧಿಸಿದ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರವರಿಗೆ ಸಲ್ಲಿಸುವುದು.

ಆ. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರು ಅರ್ಜಿ ಬಂದ ನಂತರ ಸದರಿ ಘಟಕಕ್ಕೆ ಭೇಟಿ ನೀಡಿ ಘಟಕದವರು ನೀಡಿರುವ ಮಾಹಿತಿ ಹಾಗೂ ವಹಿವಾಟಿನ ವಿವರಗಳನ್ನು ಪರಿಶೀಲಿಸಿ ಘಟಕ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತರಿ ಪಡಿಸಿಕೊಂಡು ಅನುಬಂಧ-2 ರಲ್ಲಿ ವರದಿ ಮಾಡುವುದು.

ಇ. ಜಂಟಿ ನಿರ್ದೇಶಕರು ಸದರಿ ಪ್ರಸ್ತಾವನೆಗಳನ್ನು ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹ ಮಂಜೂರಾತಿ ಸಮಿತಿಯಲ್ಲಿಟ್ಟು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಮಂಜೂರು ಮಾಡುವುದು. ಸಭೆಯ ನಡವಳಿಯೊಂದಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಬಿಡುಗಡೆಗೆ ಘಟಕವಾರು ಪ್ರಸ್ತಾವನೆಗಳನ್ನು ಆಯುಕ್ತರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

ಈ. ಗ್ರಾಮೀಣ ಕೈಗಾರಿಕೆ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮ ವಿಭಾಗದಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಬಿಡುಗಡೆ ಮಾಡುವುದು.

...2

ಘಟಕದವರು ಸಲ್ಲಿಸಬೇಕಾದ ದಾಖಲಾತಿಗಳು:-

- ನಿಗದಿತ ನಮೂನೆಯಲ್ಲಿ ಅರ್ಜಿ – ಅನುಬಂಧ-ಅ.
- ಘಟಕದ ಕಳೆದ ಮೂರು ವರ್ಷಗಳ ವಹಿವಾಟಿನ ವಿವರಗಳನ್ನು ಚಾರ್ಟೆಡ್ ಅಕೌಂಟೆಂಟ್ ರವರ ದೃಢೀಕರಣದೊಂದಿಗೆ ಸಲ್ಲಿಸುವುದು.
- ಬಂಡವಾಳ ಹೂಡಿಕೆ ಪ್ರಮಾಣಪತ್ರ.(ಹಣಕಾಸು ಸಂಸ್ಥೆಯಿಂದ)
(ಮೊದಲನೇ ಸಲದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನದ ಕ್ಲೈಮ್‌ಗೆ ಮಾತ್ರ)
- ಘಟಕದ ಉದ್ಯೋಗ್ ಆಧಾರ್ ಪ್ರತಿ.
- ಕಳೆದ ಮೂರು ವರ್ಷಗಳ ಬ್ಯಾಲೆನ್ಸ್ ಶೀಟ್ (ಚಾರ್ಟೆಡ್ ಅಕೌಂಟೆಂಟ್ ರವರ ದೃಢೀಕರಣದೊಂದಿಗೆ)
- ಕಳೆದ ಮೂರು ವರ್ಷಗಳ ಆದಾಯ ತೆರಿಗೆ ರಿಟರ್ನ್ಸ್.
- ಆಧಾರ್ ಕಾರ್ಡ್ / ಪಾನ್ ಕಾರ್ಡ್ ಪ್ರತಿ.
- ಜಿಎಸ್‌ಟಿ ರಿಜಿಸ್ಟ್ರೇಷನ್/ರಿಟರ್ನ್ಸ್ ಪ್ರತಿ.
- ಕ್ಲೈಮ್‌ಗೆ ಸಂಬಂಧಿಸಿದಂತೆ ಕಳೆದ 6 ತಿಂಗಳ ವಿದ್ಯುತ್ ಬಿಲ್ ಮತ್ತು ಪಾವತಿಸಿದ ರಸೀದಿ ಪ್ರತಿ.
- ಜಿಲ್ಲಾ ಕೈಗಾರಿಕಾ ಕೇಂದ್ರದ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿದ ವರದಿ– ಅನುಬಂಧ-2.
- ಘಟಕದ ಬ್ಯಾಂಕ್ ಖಾತೆಯ ವಿವರ/ಪಾಸ್‌ಬುಕ್ ಪ್ರತಿ.
- ಘಟಕದ ಭೂಮಿ/ಕಟ್ಟಡದ ದಾಖಲಾತಿ.(ಬಾಡಿಗೆ ಕರಾರು ಪತ್ರ/ಖಾತಾ & ಕಂದಾಯ ಪಾವತಿಸಿರುವ ರಸೀದಿ)

ಷರತ್ತುಗಳು ಮತ್ತು ನಿಬಂಧನೆಗಳು:-

ಅ) ಈ ಯೋಜನೆಯು ತೆಂಗಿನ ನಾರು ಮತ್ತು ಇತರೆ ಉಪ ಉತ್ಪನ್ನಗಳನ್ನು ತಯಾರಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.

ಆ) ಮಾರುಕಟ್ಟೆ ಅಭಿವೃದ್ಧಿ ಸಹಾಯಧನಕ್ಕಾಗಿ ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ಕಾಯರ್ ಫೈಬರ್, ಕಾಯರ್ ಪಿತ್, ಕಾಯರ್ ಪಿತ್ ಬ್ಲಾಕ್, ಕಾಯರ್ ಪಿತ್ ಉತ್ಪನ್ನಗಳು, ಕಾಯರ್ ಪಿಟ್ ಜೈವಿಕ ಗೊಬ್ಬರ, ಕಾಯರ್ ದಾರ, ಮ್ಯಾಟ್ಸ್, ಮ್ಯಾಟಿಂಗ್, ರಬ್ಬರೀಕೃತ ಕಾಯರ್ ಸರಕುಗಳು, ಕಾಯರ್ ಜಿಯೋ ಟೆಕ್ಸ್‌ಟೈಲ್ಸ್, ಗಾರ್ಡನ್ ಆರ್ಟಿಕಲ್ಸ್, ಕಾಯರ್ ಬ್ಯಾಗ್ಸ್, ಕಾಯರ್ ಕರಕುಶಲ ವಸ್ತುಗಳು, ಕಾಯರ್ ಮರ ಮತ್ತು ಇತರ ಕಾಯರ್ ನವೀನ ಉತ್ಪನ್ನಗಳು ಉತ್ಪಾದಿಸಿದ ಉತ್ಪನ್ನಗಳ ವಹಿವಾಟನ್ನು ಮಾತ್ರ ಪರಿಗಣಿಸುವುದು (ಹಾಸಿಗೆ ಘಟಕಗಳನ್ನು ಹೊರತುಪಡಿಸಿ).

ಇ) ಬಿಡುಗಡೆಯಾದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ಮೇಲೆ ತಿಳಿಸಿರುವ ಚಟುವಟಿಕೆಗಳಿಗೆ ಮಾತ್ರ ಬಳಸತಕ್ಕದ್ದು. ಮತ್ತು ಬಿಡುಗಡೆಯಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ವೆಚ್ಚದ ವಿವರದೊಂದಿಗೆ ಕಾಲ ಕಾಲಕ್ಕೆ ಸಲ್ಲಿಸುವುದು.

ಸ್ಪಷ್ಟೀಕರಣ

ಈ ಯೋಜನೆಯ ಅನುಷ್ಠಾನದಲ್ಲಿ ಸ್ಪಷ್ಟೀಕರಣ ಅವಶ್ಯವಿದ್ದಲ್ಲಿ ನಿರ್ದೇಶಕರು, ಎಂಎಸ್‌ಎಂಇ ನಿರ್ದೇಶನಾಲಯ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಂದ ಪಡೆಯಬಹುದು.

(ಸುಮತಿ ಎಸ್.) 17.12.19
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಅನುಬಂಧ-2

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ
ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳ ಮಾರುಕಟ್ಟೆ ಅಭಿವೃದ್ಧಿ ಸಹಾಯಧನಕ್ಕಾಗಿ ತಪಾಸಣಾ ವರದಿ

1	ಘಟಕದ ಹೆಸರು	
2	ಘಟಕದ ವಿಳಾಸ	
3	ಜಿಲ್ಲೆ	
4	UAM ನೊಂದಣಿ ಸಂಖ್ಯೆ ಮತ್ತು ದಿನಾಂಕ	
5	ವಿದ್ಯುತ್ ಸಂಪರ್ಕ ಆರ್.ಆರ್.ಸಂಖ್ಯೆ (ಪವರ್,ಲೈನ್)	
6	ವಿದ್ಯುತ್ ಸಂಪರ್ಕ ಆರ್.ಆರ್.ಸಂಖ್ಯೆ (ಲೈಟ್)	
7	ಉದ್ಯಮದ ವರ್ಗೀಕರಣ (ಸೂಕ್ಷ್ಮ/ಸಣ್ಣ)	
8	ತಯಾರಿಸಲಾಗುತ್ತಿರುವ ಉತ್ಪನ್ನಗಳು	
9	ಘಟಕದ ರಚನೆ (ಮಾಲೀಕತ್ವ/ ಪಾಲುದಾರಿಕೆ/ಖಾಸಗಿ/ ಸಾರ್ವಜನಿಕ ಸೀಮಿತ ಕಂಪನಿ) ಅಥವಾ ಯಾವುದೇ ಕಾನೂನು ಘಟಕ	
10	ಉದ್ಯಮಿಯ ವರ್ಗೀಕರಣ (ಸಾಮಾನ್ಯ/ಎಸ್.ಸಿ/ಎಸ್.ಟಿ, /ಮಹಿಳೆ/ ಒ.ಬಿ.ಸಿ/ಅಲ್ಪ ಸಂಖ್ಯಾತರು/ಅಂಗವಿಕಲ/ಮಾಜಿ ಸೈನಿಕರು)	
11	ಉತ್ಪಾದನೆ ಪ್ರಾರಂಭಿಸಿರುವ ದಿನಾಂಕ (ಮೊದಲ ಮಾರಾಟ ಬಿಲ್ಲಿನ ಅನ್ವಯ)	
12	ವಾಸ್ತವ ಬಂಡವಾಳ ಹೂಡಿಕೆ: (ರೂ. ಲಕ್ಷಗಳಲ್ಲಿ)	
13	ಒದಗಿಸಲಾಗಿರುವ ಉದ್ಯೋಗವಕಾಶ	
14	ಕ್ಲೈಂ ಅನ್ವಯಿಸುವ ವರ್ಷ	
15	ಮಾರಾಟ ವಹಿವಾಟು (ರೂ. ಲಕ್ಷಗಳಲ್ಲಿ)	

Year	Coir Yarn	Coir Pith	Coir fibre	Rubberized Coir goods	Coir Pith Products	Coir pith organic manure	Coir mats	Coir Geo-textile	Other Coir Products.	Total

16	ಕಳೆದ 3 ಸಾಲುಗಳ ಸರಾಸರಿ ಮಾರಾಟ ವಹಿವಾಟು	
17	ಸರಾಸರಿ ಮಾರಾಟ ವಹಿವಾಟಿನ ಶೇ.10ರಂತೆ ಅರ್ಹ ಎಂ.ಡಿ.ಎ.	
18	ಶಿಫಾರಸ್ಸು/ಷರಾ (ಘಟಕದ ಕಾರ್ಯನಿರ್ವಹಣೆಯ ವರದಿ)	

<u>ದೃಢೀಕರಣ:-</u>

ನಾನು . (ಹೆಸರು ಮತ್ತು ಪದನಾಮ) ಮೇಲಿನ ಘಟಕಕ್ಕೆ ದಿನಾಂಕ: ________________ ರಂದು ಭೇಟಿ ನೀಡಿ, ಭೌತಿಕ ತಪಾಸಣೆ ಮಾಡಿದ್ದು, ಘಟಕದ 3 ವರ್ಷಗಳ ಸರಾಸರಿ ಮಾರಾಟ ವಹಿವಾಟು ರೂ.________________ಗಳಾಗಿದ್ದು, ಇದಕ್ಕೆ ಶೇ.**10%** ರಂತೆ ಎಂಡಿಎ ರೂ.________________ಗಳಾಗಿದ್ದು ನಿಬಂಧನೆಗೊಳಪಟ್ಟು ಘಟಕಕ್ಕೆ ಎಂಡಿಎ ಗರಿಷ್ಠ ಮೊತ್ತ ರೂ.________________ಗಳನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಸ್ಥಳ:

ದಿನಾಂಕ:

ಅಧಿಕಾರಿಯ ಸಹಿ, ಹೆಸರು ಮತ್ತು ಪದನಾಮ

ಅನುಬಂಧ-1

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ
ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳು ಮಾರುಕಟ್ಟೆ ಅಭಿವೃದ್ಧಿ ಸಹಾಯಧನಕ್ಕಾಗಿ ಅರ್ಜಿ

1	ಘಟಕದ ಹೆಸರು	
2	ಘಟಕದ ವಿಳಾಸ	
3	ಜಿಲ್ಲೆ	
4	UAM ನೊಂದಣಿ ಸಂಖ್ಯೆ ಮತ್ತು ದಿನಾಂಕ	
5	ESI/EPF ನೊಂದಾಯಿಸಿದ್ದಲ್ಲಿ ಸಂಖ್ಯೆ ಮತ್ತು ದಿನಾಂಕ	
6	GST ಸಂಖ್ಯೆ ಮತ್ತು ದಿನಾಂಕ	
7	ವಿದ್ಯುತ್ ಸಂಪರ್ಕ ಆರ್.ಆರ್.ಸಂಖ್ಯೆ (ಪವರ್,ಲೈನ್)	
8	ವಿದ್ಯುತ್ ಸಂಪರ್ಕ ಆರ್.ಆರ್.ಸಂಖ್ಯೆ (ಲೈಟ್)	
9	ಉದ್ಯಮದ ವರ್ಗೀಕರಣ (ಸೂಕ್ಷ್ಮ/ಸಣ್ಣ)	
10	ತಯಾರಿಸಲಾಗುತ್ತಿರುವ ಉತ್ಪನ್ನಗಳು	
11	ಘಟಕದ ರಚನೆ (ಮಾಲಿಕತ್ವ/ ಪಾಲುದಾರಿಕೆ/ಖಾಸಗಿ/ ಸಾರ್ವಜನಿಕ ಸೀಮಿತ ಕಂಪನಿ) ಅಥವಾ ಯಾವುದೇ ಕಾನೂನು ಘಟಕ	
12	ಉದ್ಯಮಿಯ ವರ್ಗೀಕರಣ (ಸಾಮಾನ್ಯ/ಎಸ್.ಸಿ/ಎಸ್.ಟಿ, /ಮಹಿಳೆ/ ಒ.ಬಿ.ಸಿ/ಅಲ್ಪ ಸಂಖ್ಯಾತರು/ಅಂಗವಿಕಲ/ಮಾಜಿ ಸೈನಿಕರು)	
13	ಉತ್ಪಾದನೆ ಪ್ರಾರಂಭಿಸಿರುವ ದಿನಾಂಕ	
14	ವಾಸ್ತವ ಬಂಡವಾಳ ಹೂಡಿಕೆ: (ರೂ. ಲಕ್ಷಗಳಲ್ಲಿ)	
	ಕಟ್ಟಡ (ಸ್ವಂತ/ಬಾಡಿಗೆ/ಲೀಸ್(ಭೋಗ್ಯ)/ಕರಾರು ಪತ್ರ/ಖಾತಾ ಪ್ರತಿ /ಕಂದಾಯ ರಸೀದಿ.	
	ಸ್ಥಾವರ ಮತ್ತು ಯಂತ್ರೋಪಕರಣಗಳು(Plant & Machinery)	
	ಇತರೆ	
	ಒಟ್ಟು	
15	ಒದಗಿಸಲಾಗಿರುವ ಉದ್ಯೋಗವಕಾಶ	

16	ಕ್ಲೈಂ ಅನ್ವಯಿಸುವ ವರ್ಷ	
17	ಮಾರಾಟ ವಹಿವಾಟು (ರೂ. ಲಕ್ಷಗಳಲ್ಲಿ)	

Year	Coir Yarn	Coir Pith	Coir fibre	Rubberized Coir goods	Coir Pith Products	Coir pith organic manure	Coir mats	Coir Geo-textile	Other Coir Products.	Total

18	ಕಳೆದ 3 ಸಾಲುಗಳ ಸರಾಸರಿ ಮಾರಾಟ ವಹಿವಾಟು	
19	ಸರಾಸರಿ ಮಾರಾಟ ವಹಿವಾಟಿನ ಶೇ.10ರಂತೆ ಅರ್ಹ ಎಂ.ಡಿ.ಎ.	

ಅರ್ಜಿದಾರರ ಘೋಷಣೆ:

ನಾನು/ನಾವು ತೆಂಗಿನ ನಾರಿನ ಉತ್ಪನ್ನಗಳಿಗೆ ಮಾರುಕಟ್ಟೆ ಅಭಿವೃದ್ಧಿ ನೆರವು ಪಡೆಯಲು ನೀಡುತ್ತಿರುವ ಮೇಲ್ಕಂಡ ಮಾಹಿತಿಯು ನನ್ನ ಜ್ಞಾನ ಮತ್ತು ನಂಬಿಕೆಯಂತೆ ಸರಿಯಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ:

ದಿನಾಂಕ:

ಮಾಲೀಕರ/ಅಧಿಕೃತ ವ್ಯಕ್ತಿಯ ಹೆಸರು
ಮತ್ತು ಪದನಾಮ

ಅನುಬಂಧ -

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ (ತೆಂಗಿನ ನಾರಿನ ಪ್ರಾಥಮಿಕ ಸಹಕಾರ ಸಂಘಗಳನ್ನು ಒಳಗೊಂಡಂತೆ) ಕೆಲಸ ನಿರ್ವಹಿಸುತ್ತಿರುವ ಪ್ರತಿ ಕುಶಲಕರ್ಮಿಗೆ ವಾರ್ಷಿಕ 10,000/- ರೂ.ಗಳಂತೆ ಪ್ರೋತ್ಸಾಹ ವೇತನವನ್ನು ನೀಡುವ ಕುರಿತು.

ಓದಲಾಗಿದೆ:

1. ಆಯುಕ್ತರು, ಎಂ.ಎಸ್.ಎಂ.ಇ. ನಿರ್ದೇಶನಾಲಯ, ಇವರ ಪತ್ರ ಸಂ. ಕೈವಾಇ/ಗ್ರಾಕೈ&ಸ್ವಉಕಾ/ಅಧೀ/ತೆಂನಾಅ/20/2018-19,ದಿ: 17.07.2018. ಮತ್ತು ದಿ: 22.09.2018.
2. ಸರ್ಕಾರಿ ಆದೇಶ ಸಂ. ಸಿಐ 49 ಸಿಎಸ್‌ಸಿ 2017, ಬೆಂಗಳೂರು, ದಿನಾಂಕ: 06.06.2017 ಮತ್ತು 01.01.2018.
3. ಯೋಜನಾ ಇಲಾಖೆಯ ಟಿಪ್ಪಣಿ ಸಂ: ಪಿಡಿ 47 ಎಫ್‌ಆರ್‌ಒ 2018, ದಿ: 06.09.2018.
4. ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD 379 Exp-1/2018, dated: 22.10.2018.

* * * * *

<u>ಪ್ರಸ್ತಾವನೆ:</u>

2018-19ನೇ ಸಾಲಿನ ಆಯವ್ಯಯ ಭಾಷಣ (ಜುಲೈ 2018) ರ ಕಂಡಿಕೆ 104 ರಲ್ಲಿ ***"ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ತೆಂಗಿನನಾರಿನ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕುಶಲಕರ್ಮಿಗಳು ಅಲ್ಪ ಪ್ರಮಾಣದ ವೇತನವನ್ನು ಪಡೆಯುತ್ತಿರುತ್ತಾರೆ. ಆದ್ದರಿಂದ, ತೆಂಗಿನನಾರಿನ ವಲಯಕ್ಕೆ ಉತ್ತೇಜನ ನೀಡಲು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪ್ರತಿ ಕುಶಲಕರ್ಮಿಗೆ ವಾರ್ಷಿಕ 10,000/- ರೂ.ಗಳಂತೆ ಪ್ರೋತ್ಸಾಹ ವೇತನವನ್ನು ನೀಡಲು ಸರ್ಕಾರವು ಉದ್ದೇಶಿಸಿದೆ"*** ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂ: (2) ರ ಸರ್ಕಾರಿ ಆದೇಶಗಳಲ್ಲಿ ತೆಂಗುಭಾಗ್ಯ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ತೆಂಗಿನನಾರಿನ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ತೆಂಗಿನನಾರಿನ ಸಹಕಾರ ಮಹಾಮಂಡಳಿಯ ತೆಂಗು ನಾರಿನ ಕುಶಲಕರ್ಮಿಗಳಿಗೆ ಅನುರೂಪ ಪ್ರೋತ್ಸಾಹ ಧನವನ್ನು ಪಾವತಿಸಲು ಯೋಜನೆ ಜಾರಿಯಲ್ಲಿರುತ್ತದೆ.

ಅದರಂತೆ, ಮೇಲೆ ಓದಲಾದ ಕ್ರಮ ಸಂ: (1) ರ ಪತ್ರದಲ್ಲಿ ಆಯುಕ್ತರು, ಎಂ.ಎಸ್.ಎಂ.ಇ. ನಿರ್ದೇಶನಾಲಯ, ಇವರು ತೆಂಗಿನನಾರಿನ ವಲಯದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ (ತೆಂಗಿನ ನಾರಿನ ಪ್ರಾಥಮಿಕ ಸಹಕಾರ ಸಂಘಗಳನ್ನು ಒಳಗೊಂಡಂತೆ) ಕೆಲಸ ನಿರ್ವಹಿಸುತ್ತಿರುವ ಕುಶಲ ಕರ್ಮಿಗಳಿಗೆ ವಾರ್ಷಿಕ ರೂ.10,000/- ಗಳ ಮಿತಿಗೊಳಪಟ್ಟು ರಾಜ್ಯ ಸರ್ಕಾರದ ತೆಂಗುಭಾಗ್ಯ ಯೋಜನೆಯಡಿಯಲ್ಲಿ ಪ್ರೋತ್ಸಾಹ ವೇತನವನ್ನು ನೀಡಲು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2018-19ನೇ ಸಾಲಿನ ಆಯವ್ಯಯ ಭಾಷಣ (ಜುಲೈ 2018) ರ ಕಂಡಿಕೆ 104 ರ ಕುರಿತು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂ. ಸಿಐ 78 ಸಿಎಸ್‌ಸಿ 2018, ಬೆಂಗಳೂರು, ದಿನಾಂಕ: 20.11.2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನ ಆಯವ್ಯಯ ಭಾಷಣ (ಜುಲೈ 2018) ಕಂಡಿಕೆ 104 ರಲ್ಲಿ ಘೋಷಿಸಲಾಗಿರುವಂತೆ, ತೆಂಗು ಭಾಗ್ಯ ಯೋಜನೆಯಡಿಯಲ್ಲಿ ತೆಂಗಿನನಾರಿನ ವಲಯದ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ (ತೆಂಗಿನ ನಾರಿನ ಪ್ರಾಥಮಿಕ ಸಹಕಾರ ಸಂಘಗಳನ್ನು ಒಳಗೊಂಡಂತೆ) ಕೆಲಸ ನಿರ್ವಹಿಸುತ್ತಿರುವ ಕುಶಲ ಕರ್ಮಿಗಳಿಗೆ ವಾರ್ಷಿಕ ರೂ.10,000/- ಗಳ ಮಿತಿಗೊಳಪಟ್ಟು ಪ್ರೋತ್ಸಾಹ ವೇತನವನ್ನು ನೀಡುವ ಹೊಸ ಯೋಜನೆಗೆ ಅನುಬಂಧ-1ರಲ್ಲಿ ನೀಡಿರುವ ಮಾರ್ಗಸೂಚಿಗಳೊಂದಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

- ಸದರಿ ಯೋಜನೆಯನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿರುವ ಅನುದಾನದ ಮಿತಿಯೊಳಗೆ ಅನುಷ್ಠಾನಗೊಳಿಸುವುದು.
- ಪ್ರತಿ ಕಾರ್ಮಿಕ/ಳು ಸದರಿ ಕೈಗಾರಿಕೆಗಳಲ್ಲಿ ವರ್ಷವೊಂದರಲ್ಲಿ ಸರಾಸರಿ ಕಾರ್ಯನಿರ್ವಹಿಸುವ ದಿನಗಳನ್ನು ಪರಿಶೀಲಿಸಿ, ಸದರಿ 120 ದಿನಗಳ ಕನಿಷ್ಠ ಮಿತಿಯನ್ನು ಮೇಲ್ಮುಖವಾಗಿ ಪರಿಷ್ಕರಿಸಲು ಪರಿಶೀಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ: ಒಡಿ 47 ಎಫ್‌ಆರ್‌ಒ 2018, ದಿ: 06.09.2018 ಮತ್ತು ಯೋಜನಾ ಇಲಾಖೆಯು ಟಿಪ್ಪಣಿ ಸಂ: FD 379 Exp-1/2018, dated: 22.10.2018 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[ಸುಮತಿ ಎಸ್.] 20.11.18
ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, 'ಆಡಿಟ್ ಭವನ', ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು – 560001.
3. ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು – 560001.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.

5. ಮಾನ್ಯ ಸಣ್ಣ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಆಯುಕ್ತರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1.
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ವಿಟಿಪಿಸಿ ಬಿಲ್ಡಿಂಗ್, ಕಸ್ತೂರಿಬಾ ರಸ್ತೆ, ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಕಟ್ಟಡ, 3ನೇ ಮಹಡಿ, 1ನೇ ಅಡ್ಡರಸ್ತೆ, ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–10.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–1), ವಿಧಾನಸೌಧ, ಬೆಂಗಳೂರು–1.
10. ಹಿರಿಯ ನಿರ್ದೇಶಕರು (ಪಿಎಫ್ಆರ್), ಯೋಜನಾ ಇಲಾಖೆ, ಕೊ.ಸಂ. 720, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸಮನ್ವಯ & ಸೇವೆಗಳು), ವಿಕಾಸಸೌಧ, ಬೆಂಗಳೂರು. (ಮಲ್ಟಿಗ್ರಾಫ್ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗೆ ಕಳುಹಿಸುವ ಸಲುವಾಗಿ)
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂ: ಸಿಐ 78 ಸಿಎಸ್‌ಸಿ 2018, ದಿ: 20.11.2018ರ ಅನುಬಂಧ-1

ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೌಶಲ್ಯ ಕಾರ್ಮಿಕರಿಗೆ ಅನುರೂಪ ವೇತನ ಪ್ರೋತ್ಸಾಹಧನ ನೀಡುವ ಬಗ್ಗೆ ಮಾರ್ಗಸೂಚಿಗಳು.

ಹಿನ್ನೆಲೆ:

ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ತೆಂಗಿನ ನಾರನ್ನು ಬಳಸಿ ಮೌಲ್ಯಾಧಾರಿತ ವಸ್ತುಗಳನ್ನು ಉತ್ಪಾದಿಸುವಲ್ಲಿ ಅನೇಕ ಗ್ರಾಮೀಣ ಭಾಗದ ನಿರುದ್ಯೋಗಿ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗದ ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. ಆದರೆ ಅದು ಲಾಭದಾಯಕವಲ್ಲದಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಸಾಧ್ಯವಾಗದೇ ಕನಿಷ್ಟ ಉದ್ಯೋಗಾವಕಾಶ ನೀಡಲಾಗುತ್ತಿದೆ. ಈ ಹಿನ್ನೆಯಲ್ಲಿ ಸರ್ಕಾರವು ತೆಂಗಿನ ನಾರಿನ ವಲಯಗಳಲ್ಲಿ ಕಾರ್ಯನಿರ್ವಹಿಸುವ ಕುಶಲಕರ್ಮಿಗಳಿಗೆ ಅನುರೂಪ ವೇತನ ಪ್ರೋತ್ಸಾಹ ಧನ ಪಾವತಿ ಮಾಡುವುದರಿಂದ ಹೆಚ್ಚಿನ ಕುಶಲಕರ್ಮಿಗಳಿಗೆ ಉದ್ಯೋಗಾವಕಾಶ ನೀಡಿದಂತಾಗುವುದಲ್ಲದೆ ಅವರ ಸಾಮಾಜಿಕ ಮಟ್ಟ ಸುಧಾರಿಸುವಲ್ಲಿ ಸರ್ಕಾರದ ಯೋಜನೆ ಫಲಪ್ರದವಾಗುತ್ತದೆ.

ಲೆಕ್ಕ ಶೀರ್ಷಿಕೆ:

2851-00-106-0-12(059)- ಇತರೆ ವೆಚ್ಚ, ತೆಂಗಿನ ನಾರಿನ ವಲಯಕ್ಕೆ ನೆರವು-ತೆಂಗು ಭಾಗ್ಯ.

ಅನುಷ್ಠಾನ ಸಂಸ್ಥೆ

ಜಿಲ್ಲಾ ಕೈಗಾರಿಕಾ ಕೇಂದ್ರಗಳು

ಅನುರೂಪ ವೇತನ ಪ್ರೋತ್ಸಾಹ ಧನ

ಪ್ರತಿ ತೆಂಗಿನ ನಾರಿನ ಕೌಶಲ್ಯ ಕಾರ್ಮಿಕರಿಗೆ ವಾರ್ಷಿಕ ಗರಿಷ್ಟ ರೂ.10000/-ಗಳನ್ನು ಅನುರೂಪ ವೇತನ ಪ್ರೋತ್ಸಾಹಧನವನ್ನಾಗಿ ಪಾವತಿಸುವುದು.

ಪ್ರೋತ್ಸಾಹಧನ ಕ್ಲೇಮ್ ಮಾಡುವ ವಿಧಾನ

1. ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಕೌಶಲ್ಯ ಕಾರ್ಮಿಕರಿಗೆ ಪ್ರೋತ್ಸಾಹಧನಕ್ಕಾಗಿ ಘಟಕವು ಅನುಬಂಧ-ಅ ರಲ್ಲಿನ ಅರ್ಜಿಯನ್ನು ಭರ್ತಿ ಮಾಡಿ ಸೂಕ್ತ ದಾಖಲಾತಿಗಳೊಂದಿಗೆ ತಮ್ಮ ದೃಢೀಕರಣದೊಂದಿಗೆ ಸಂಬಂಧಿಸಿದ ಜಿಲ್ಲೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರಿಗೆ ಸಲ್ಲಿಸುವುದು.
2. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ರವರು ಅರ್ಜಿ ಬಂದ ನಂತರ ಸದರಿ ಘಟಕಕ್ಕೆ ಬೇಟಿ ನೀಡಿ ಘಟಕ ಕಾರ್ಯನಿರ್ವಹಿಸುತ್ತಿರುವುದನ್ನು ಖಾತರಿ ಪಡಿಸಿಕೊಂಡು, ಪ್ರೋತ್ಸಾಹಧನ ಪಡೆಯಲು ಅರ್ಹ ಕುಶಲಕರ್ಮಿಗಳನ್ನು ಗುರುತಿಸಿ ಪರಿಶೀಲಿಸುವುದು.

3. ಜಂಟಿ ನಿರ್ದೇಶಕರು ಸದರಿ ಪ್ರಸ್ತಾವನೆಗಳನ್ನು ಜಿಲ್ಲಾ ಮಟ್ಟದ ರಿಯಾಯಿತಿ/ಪ್ರೋತ್ಸಾಹ ಮಂಜೂರಾತಿ ಸಮಿತಿಯಲ್ಲಿಟ್ಟು ಅನುರೂಪ ವೇತನ ಪ್ರೋತ್ಸಾಹಧನವನ್ನು ಮಂಜೂರು ಮಾಡಿ ಸಭೆಯ ನಡವಳಿ ಹಾಗೂ ತನಿಖಾ ವರದಿಯೊಂದಿಗೆ ಪ್ರೋತ್ಸಾಹಧನ ಬಿಡುಗಡೆಗೆ ಘಟಕವಾರು ಪ್ರಸ್ತಾವನೆಗಳನ್ನು ಆಯುಕ್ತರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯ ಇವರಿಗೆ ಸಲ್ಲಿಸುವುದು.
4. ಜಂಟಿ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮ) ಇವರ ವಿಭಾಗದಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸುವುದು.
5. ಅನುರೂಪ ವೇತನ ಪ್ರೋತ್ಸಾಹಧನವನ್ನು ಕೌಶಲ್ಯ ಕಾರ್ಮಿಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡುವುದು.

<u>ಸಲ್ಲಿಸಬೇಕಾದ ದಾಖಲಾತಿಗಳು</u>

- ಘಟಕದ ಲೆಟರ್ ಹೆಡ್ ನಲ್ಲಿ ಪ್ರೋತ್ಸಾಹಧನಕ್ಕಾಗಿ ಮನವಿ
- ನಿಗಧಿತ ನಮೂನೆಯಲ್ಲಿ ಅರ್ಜಿ–ಅನುಬಂಧ –1
- ಬಂಡವಾಳ ಹೂಡಿಕೆ ಪ್ರಮಾಣ ಪತ್ರ – ಅನುಬಂಧ–2
- ಘಟಕಗಳಲ್ಲಿ ತೆಂಗಿನ ನಾರು ಮತ್ತು ಇತರೆ ಉಪ ಉತ್ಪನ್ನಗಳ ನೇರ ಉತ್ಪಾದನೆಯಲ್ಲಿ ತೊಡಗಿರುವ ಕೌಶಲ್ಯ ಕಾರ್ಮಿಕರ ವಿವರ – ಅನುಬಂಧ –3
- ಸಂಬಂಧಿಸಿದ ಗ್ರಾಮ ಪಂಚಾಯಿತಿ/ನಗರಸಭೆ/ಸ್ಥಳೀಯ ಸಂಸ್ಥೆಯಿಂದ ಅನುಮತಿ ಪತ್ರ.
- ಕೌಶಲ್ಯ ಕಾರ್ಮಿಕರ ಆಧಾರ್ ಕಾರ್ಡ್ ಪ್ರತಿಗಳು
- ಉದ್ಯೋಗ್ ಆಧಾರ್ ಪ್ರತಿ
- ಕುಶಲಕರ್ಮಿಯ ಬ್ಯಾಂಕ್ ಖಾತೆಯ ವಿವರ (ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ)
- ವೇತನ ಜಮೆಯಾಗಿರುವ ವಿವರವನ್ನೊಳಗೊಂಡ ಪಾಸ್‌ಬುಕ್‌ನ ಪ್ರತಿ
- ಇ.ಪಿ.ಎಫ್ ಮತ್ತು ಇ.ಎಸ್.ಐ ಖಾತೆ ಸಂಖ್ಯೆ ಲಭ್ಯವಿದ್ದಲ್ಲಿ
- ಜಿ.ಎಸ್.ಟಿ. ರಿಜಿಸ್ಟ್ರೇಷನ್ /ರಿಟನ್ಸ್ ಪ್ರತಿ ಅನ್ವಯಿಸಿದ್ದಲ್ಲಿ
- ಕ್ಲೇಮ್ ಗೆ ಸಂಬಂಧಿಸಿದ ತಿಂಗಳುಗಳ ವಿದ್ಯುತ್ ಬಿಲ್ ಮತ್ತು ಪಾವತಿಸಿದ ಸ್ವೀಕೃತಿಗಳ ಪ್ರತಿ
- ಘಟಕದ ವಾರ್ಷಿಕ ಉತ್ಪನ್ನದ ವಿವರ
- ವೇತನ ವಿವರಗಳನ್ನೊಳಗೊಂಡ ಅಕ್ವಿಟೆನ್ಸ್ ಪ್ರತಿ
- ಅವಶ್ಯವಿದ್ದಲ್ಲಿ ಇತರೆ ದಾಖಲೆಗಳು

<u>ಷರತ್ತುಗಳು ಮತ್ತು ನಿಬಂಧನೆಗಳು</u>

- ಈ ಯೋಜನೆಯು ತೆಂಗಿನ ನಾರು ಮತ್ತು ಇತರೆ ಉಪ ಉತ್ಪನ್ನಗಳನ್ನು ತಯಾರಿಸಲು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.

➢ ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳಲ್ಲಿ ನೇರ ಉತ್ಪಾದನೆಯಲ್ಲಿ ತೊಡಗಿರುವ ಕೌಶಲ್ಯ ಕಾರ್ಮಿಕರು ಜನವರಿ ಇಂದ ಡಿಸಂಬರ್ ವರೆಗೆ ವರ್ಷದಲ್ಲಿ ಕನಿಷ್ಟ 120 ದಿನಗಳು ಕೆಲಸ ನಿರ್ವಹಿಸಿರತಕ್ಕದ್ದು

➢ ಅನುರೂಪ ವೇತನ ಪ್ರೋತ್ಸಾಹಧನವನ್ನು ಆಯಾ ಕೌಶಲ್ಯ ಕಾರ್ಮಿಕರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು

➢ ಅನುದಾನ ಬಳಕೆ ಪ್ರಮಾಣ ಪತ್ರವನ್ನು ಕಾಲಕಾಲಕ್ಕೆ ಸಲ್ಲಿಸುವುದು.

ಪ್ರೋತ್ಸಾಹಧನ ಕ್ಲೇಮ್‌ನ ಕಾಲ ಮಿತಿ:

2018–19 ನೇ ಸಾಲಿಗೆ : ಏಪ್ರಿಲ್ 2018 ರಿಂದ ಡಿಸೆಂಬರ್ 2018 ರವರೆಗೆ
ನಂತರದ ಆರ್ಥಿಕ ವರ್ಷಗಳಿಗೆ : ಜನವರಿ ಇಂದ ಡಿಸೆಂಬರ್ ವರೆಗೆ

1) ಪ್ರೋತ್ಸಾಹಧನದ ಕ್ಲೇಮನ್ನು ಪಡೆಯಲು ತೆಂಗಿನನಾರು ಮತ್ತು ಇತರೆ ಉಪ ಉತ್ಪನ್ನಗಳನ್ನು ತಯಾರಿಸುವ ಸೂಕ್ಷ್ಮ / ಸಣ್ಣ ಕೈಗಾರಿಕಾ ಘಟಕವು ಸಂಬಂಧಪಟ್ಟದ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವುದು.	ಜನವರಿ 1 ರಿಂದ ಜನವರಿ 15 ರವರೆಗೆ
2) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಸ್ವೀಕರಿಸಿದ ಅರ್ಜಿಯನ್ನು ಪರಿಶೀಲಿಸಿ ಸದರಿ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೌಶಲ್ಯ ಕಾರ್ಮಿಕರಿಗೆ ಮಾರ್ಗಸೂಚಿಯ ಪ್ರಕಾರ ಅರ್ಹತೆಯ ಆಧಾರದ ಮೇಲೆ ಪ್ರೋತ್ಸಾಹಧನವನ್ನು ಮಂಜೂರು ಮಾಡುವುದು.	1 ವಾರದೊಳಗೆ
3) ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಇವರು ಪ್ರೋತ್ಸಾಹಧನದ ಕ್ಲೇಮನ್ನು ಆಯುಕ್ತರು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನಿರ್ದೇಶನಾಲಯಕ್ಕೆ ಸಲ್ಲಿಸುವುದು	1 ವಾರದೊಳಗೆ

ಜಂಟಿ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ ಮತ್ತು ಸ್ವಯಂ ಉದ್ಯೋಗ ಕಾರ್ಯಕ್ರಮ) ಇವರ ವಿಭಾಗದಲ್ಲಿ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಅನುದಾನ ಲಭ್ಯತೆಯ ಆಧಾರದ ಮೇಲೆ ಸರ್ಕಾರದಿಂದ ಪ್ರೋತ್ಸಾಹಧನ ಬಿಡುಗಡೆ ಮಾಡುವುದು.

ಸ್ಪಷ್ಟೀಕರಣ:

ಈ ಯೋಜನೆಯ ಅನುಷ್ಠಾನದಲ್ಲಿ ಸ್ಪಷ್ಟೀಕರಣ ಅವಶ್ಯಕತೆ ಇದ್ದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಂದ ಪಡೆಯಬಹುದಾಗಿರುತ್ತದೆ.

[ಸುಮತಿ ಎಸ್.] 30.11.18

ಸರ್ಕಾರದ ಅಧೀನ ಕಾರ್ಯದರ್ಶಿ [ಸಪ್ರಕೈ],
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ANNEXURE-1

APPLICATION FOR SANCTION OF WAGE INCENTIVE TO SKILLED *LABOURER WORKING IN MICRO / SMALL COIR FIBRE INDUSTRY*

<table>
<tr><td>1</td><td>Name of the Enterprise</td><td colspan="5"></td></tr>
<tr><td>2</td><td>Name of the Proprietor / Director/ Secretary</td><td colspan="5"></td></tr>
<tr><td>3</td><td>Office address,
Phone No.
Fax No.
e-mail,
Mobile No.</td><td colspan="5"></td></tr>
<tr><td>4</td><td>Works address,
Phone No.
Fax No.
e-mail,
Mobile No.</td><td colspan="5"></td></tr>
<tr><td></td><td>Size of the enterprise</td><td colspan="2">Micro</td><td colspan="3">Small</td></tr>
<tr><td>5</td><td>Udyog Aadhar No.
And date</td><td colspan="5"></td></tr>
<tr><td>6</td><td>Constitution of the unit</td><td>Proprietary</td><td>Partnership</td><td colspan="2">Private ltd</td><td>Co-operative society</td></tr>
<tr><td>7</td><td>Category of the entrepreneur</td><td>Gen</td><td>OBC</td><td>SC</td><td>ST</td><td>Min</td></tr>
<tr><td>8</td><td>Products manufactured</td><td colspan="5">1.
2.
3.
4.</td></tr>
<tr><td>9</td><td>Production capacity (Item wise)</td><td colspan="5"></td></tr>
<tr><td>10</td><td>GST registration No.</td><td colspan="5"></td></tr>
<tr><td>11</td><td>ESCOM RR. No.</td><td colspan="5"></td></tr>
<tr><td>12</td><td>Actual investment details
Land
Building
Plan & Machinery
Total</td><td colspan="5"></td></tr>
<tr><td>13</td><td>Total skilled labourers directly engaged in production of coir products</td><td colspan="5"></td></tr>
</table>

14	List of machineries	

Declaration by the Enterprise:

I / We hereby certify that the particulars given above for the purpose of sanction of wage incentives to skilled labourers working in small / micro coir fibre industry from the Government of Karnataka are to the best of my/our knowledge and belief, are true and correct. I /We further certify that I / We have employed any child labourers.

If the information provided by me as whole or part of it is found wrong, I am liable for legal proceedings.

Place :

Date :

Signature(s)

Name and Designation of the Proprietor/
Managing Partner/Managing Director/Authorised Person

Certificate by the Assistant Director/Deputy Director:

1. I hereby certify that the particulars given by the applicant were verified by me with reference to documents furnished by the applicant and found to be true and correct.
2. I further certify that the unit is micro / small category.
3. I further certify that I have verified the skilled labourers working in the unit as provided by the industry.
4. I further certify that the unit is working and engaged in production of coir fibre products only.
5. I further certify that the unit has employed child labour.

Place :

Date :

Asst. Director / Dy. Director
District Industries Centre
____________ dist.

ANNEXURE-2

FIXED INVESTMENT CERTIFICATE FROM CHARTED ACCOUNTANT

This is to certify that M/s ________________________ located ____________________ engaged in production of coir fibre products has invested an amount of Rs. ______________________

The investment made by the enterprise is as shown below:

1	Land	Rs.
2	Building	Rs.
3	Plant and machineries	Rs.
4	Electrification	Rs
5	Tool and jigs	Rs.
	Total	Rs.

Seal and signature of CA

ANNEXURE-3

LIST OF EMPLOYEES DIRECTLY INVOLVED IN PRODUCTION OF COIR PRODUCTS IN MICRO / SMALL COCONUT FIBRE INDUSTRY

Period:

NO.	Name of the employee	Aadhar No.	Bank SB a/c No.	Bank name	Branch Name	IFSC code	Month and year	No. of days worked	Wages paid in Rs.
1									
2									
3									

ANNEXURE-4

FORMAT FOR SANCTION ORDER OF WAGE INCENTIVE TO SKILLED LABOURER WORKING IN MICRO / SMALL COIR FIBRE INDUSTRY.

GOVERNMENT OF KARNATAKA
DEPARTMENT OF INDUSTRIES AND COMMERCE

No.

Office of the Joint Director
District Industries Centre,
__________ date:_______

SANCTION ORDER

Sub: Sanction of Incentive wages of Rs.10,000 per annum to the skilled labourer working in micro and small coconut fibre industry to M/s. .... located at ....

Ref: 1. G. O.____________________
2. Your application dated:________

* * *

We are pleased to inform you that the District Industries Centre has sanctioned a sum of Rs.__________(Rupees. _________ only) as wage Incentive to skilled labourer for the period __________ for your enterprise located at ________

The details of wage incentives to skilled labourers working in your unit is as approved in the **ANNEXURE -5**

The sanction of this wage incentive to skilled labourers is subject to following conditions:

1. In the event of the incentive wages to skilled labourers being sanctioned, while at a later date found to be not actually due, the grantee shall refund to Government such portion or whole amount as determined by the Directorate of Industries and Commerce / Joint Director , DIC———. In the event of the grantee failing of refund such amount, the same shall be recovered as arrears of land revenue.
2. The incentive wages to skilled labourers sanctioned will be partly / fully depending upon the funds available.
3. The Joint Director, District Industries Centre shall also monitor the employment provided to local people.

Joint Director
District Industries Centre

To:
M/s

ANNEXURE-5

LIST OF EMPLOYEES APPROVED BY DIC FOR INCENTIVE WAGES TO SKILLED LABOURER WORKING IN MICRO / SMALL COCONUT FIBRE INDUSTRY

Period:

NO.	Name of the employee	Aadhar No.	Bank SB a/c No.	Bank name	Branch Name	IFSC code	Month and year	No. of days worked	Wages paid in Rs.
1									
2									
3									

Joint Director
District Industries Centre,
____________ dist.

అనుబంధ - 5

PMEGP Loan Sanction for the period from 2017-18 to 2019-20 Under Byndoor MLA Constituency

SLNo	Applicant Name	Unit Address	Product Desc/Activity	Financing Branch Address	Sanctioned by Bank	MM Involve	Year
1	AJITH KUMAR	M/S DURGA SHAMIYANA, GUDDIANGADI KOLLUR ROAD, KUNDAPURA TALUK Dist:UDUPI Pin:576230	Mandap Decoration / MANDAP AND SHAMIYANA HIRING UNIT	KARNATAKA BANK LTD , GROUND FLOOR, NEAR SIDDI VINAYAKA TEMPLE, CAR STREET, HATTIANGADI VILLAGE GP, 576230, KUNDAPUR TALUK, UDUPI DIST,IFSC Code:KARB0000298	950000	315000	2017-18
2	VIVEK NAYAK	SRI SIDDHIVINAYAKA WELDING WORKS, KOLLURU ROAD KALTHODU POST 7 VILLAGE, KUNDAPURA TALUK Dist:UDUPI	Welding Work / WELDING AND FABRICATION WORKS UNIT	VIJAYA BANK , KAMBADAKONE KUNDAPUR TALUK UDUPI DISTRICT KARNATAKA STATE 576219,IFSC Code:VIJB0001106	900000	250000	2017-18
3	MOMIN ISHRATH	SMT. MOMIN ISHRATH W/O MOHAMMED FAHIM BUKARI COLONY ,MAIN ROAD ,SHIRURU VILLAGE,KUNDAPURA TALUK Dist:UDUPI Pin:576228	Pepsi Unit/ Cold/Soft Drinks / SOFT DRINKS, SODA ETC.	VIJAYA BANK , PRABHU BUILDING N H 66 MARKET SHIRUR UDUPI KARNATAKA 576228,IFSC Code:VIJB0001526	2375000	875000	2017-18
